# <u>ಉತ್ತರ ಕನ್ನಡ ಜಿಲ್ಲೆಯ ಸ್ಥೂಲ ಪರಿಚಯ</u>

**ಕೈಗಾ ಅಣು ವಿದ್ಯುತ್ ಸ್ಥಾವರ :**

**ದೂರ ಎಷ್ಟು?**
ತಾಲೂಕು : ಕಾರವಾರ
ತಾಲೂಕಿನಿಂದ : ೬೪ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೬೪ ಕಿ.ಮೀ



ಕಾರವಾರದಿಂದ ಜೋಯಿಡಾ ಮಾರ್ಗವಾಗಿ ಸಾಗುವಾಗ ಕದ್ರಾ ಜಲ ವಿದ್ಯುತ್ ಯೋಜನೆಯನ್ನು ಕಾಣಬಹುದು. ಕದ್ರಾದಿಂದ ಎಡಕ್ಕೆ ೨೦ ಕಿ.ಮೀ ಮುಂದೆ ಕೊಡಸಳ್ಳಿ ಜಲಾಶಯ ಇದೆ. ಕದ್ರಾದಿಂದ ಬಲಕ್ಕೆ ೨೦ ಕಿ.ಮೀ ಸಾಗಿದಾಗ ಕೈಗಾ ಅಣು ವಿದ್ಯುತ್ ಸ್ಥಾವರವಿದೆ.

**ಅಂಕೋಲಾ**

**ದೂರ ಎಷ್ಟು?**
ತಾಲೂಕು : ಅಂಕೋಲಾ
ತಾಲೂಕಿನಿಂದ : ೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೩೩ ಕಿ.ಮೀ.



೧೯೩೦ರ ಉಪ್ಪಿನ ಸತ್ಯಾಗ್ರಹದಿಂದಾಗಿ ಕರ್ನಾಟಕದ 'ಬಾರ್ಡೋಲಿ' ಎಂದು ಪ್ರಖ್ಯಾತಿ ಹೊಂದಿದ ನಾಡು ಅಂಕೋಲಾ. ಚುಟುಕು ಬ್ರಹ್ಮ ದಿನಕರ ದೇಸಾಯಿಯವರು ಜನಿಸಿದ ಊರು. ಕಲೆ, ಸಾಹಿತ್ಯ, ಜಾನಪದ ಕಲೆಗಳಿಗೆ ಇಲ್ಲಿನ ಜನರ ಕೊಡುಗೆ ಅಪಾರ. ಕರಿ ಇಷಾಡು ಮಾವಿನ ಹಣ್ಣಿನ ಖ್ಯಾತಿಯ ನಾಡು, ಸಾಲು ಸಾಲು ದೇವಾಲಯಗಳ ಬೀಡು. ಇದನ್ನು ವೀಕ್ಷಿಸುವದೇ ಐಭೋಗ.

ಸ್ವಾತಂತ್ರ್ಯ ಹೋರಾಟದ ಅತಿ ಮುಖ್ಯವಾದ ಕಾಲಘಟ್ಟದಲ್ಲಿ (೧೯೨೦-೪೭) ತಮ್ಮ ಬದುಕನ್ನು ದೇಶ ಸೇವೆಗಾಗಿ ಸಮರ್ಪಿಸಿಕೊಂಡು ಅದ್ಭುತ ಚರಿತ್ರೆ ನಿರ್ಮಿಸಿದವರು ಅಂಕೋಲೆಯ ಜನ. ಆ ಯಶೋಗಾಥೆಯ ಶಾಶ್ವತ

ನೆನಪಿಗಾಗಿ 'ಸ್ವಾತಂತ್ರ್ಯ ಸಂಗ್ರಾಮ ಭವನ' ಎಂಬ ಕಟ್ಟಡ ಸಂಕೀರ್ಣವು ರಾಷ್ಟ್ರೀಯ ಸೌಧದ ರೂಪದಲ್ಲಿ ವಿಧಾಯಕ ಕಾರ್ಯಚಟುವಟಿಕೆಗಳ ಕೇಂದ್ರ ಸ್ಥಾನವಾದ ಗಾಂಧಿಮೈದಾನದಲ್ಲಿ ತಲೆಯೆತ್ತಿ ನಿಂತಿದೆ. ಅಂಕೋಲಾ ಮಂಜಗುಣಿ ಮಾರ್ಗದಲ್ಲಿ ೮ ಕಿ. ಮೀ. ದೂರದಲ್ಲಿರುವ ಹನಿಬೀಚ್, ಬೇಲೇಕೇರಿ ಸಮುದ್ರ ತೀರಗಳೂ ಕೂಡ ವಿದೇಶಿ ಪ್ರವಾಸಿಗರ ಆಕರ್ಷಣೆಯ ತಾಣವಾಗಿವೆ.

**ಶಾಂತಾದುರ್ಗಾ ದೇವಾಲಯ**

**ದೂರ ಎಷ್ಟು?**
ತಾಲೂಕು : ಅಂಕೋಲಾ
ತಾಲೂಕಿನಿಂದ : ೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೩೩ ಕಿ.ಮೀ




ಶಾಂತಾದುರ್ಗಾ ದೇವಿಯು ಅಂಕೋಲಾದ ಜನರಿಗೆ ಗ್ರಾಮ ದೇವತೆಯಾಗಿದೆ. ಇಲ್ಲಿನ ಬಂಡಿಹಬ್ಬವು ಧಾರ್ಮಿಕ ಆಚರಣೆಯ ಪ್ರಮುಖ ಉತ್ಸವವಾಗಿದೆ.

ಅಷ್ಟೇ ಅಲ್ಲದೇ ಹತ್ತಿರದಲ್ಲಿ ನಡೆಯುವ ಕೊಗ್ರೆ ಬಂಡಿಹಬ್ಬವೂ ಪ್ರಮುಖವಾಗಿದೆ.

**ಕ್ಯಾತಾಯಿನಿ ಬಾನೇಶ್ವರ ದೇವಾಲಯ**


**ದೂರ ಎಷ್ಟು?**
ತಾಲೂಕು : ಅಂಕೋಲಾ
ತಾಲೂಕಿನಿಂದ : ೧೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೨೪ ಕಿ.ಮೀ



ಕಾತ್ಯಾಯಿನಿ ಬಾಣೇಶ್ವರ ದೇವಾಲಯ ಅಂಕೋಲಾದಿಂದ ೧೦ ಕಿ.ಮೀ ಹಾಗೂ ಕಾರವಾರ - ಅಂಕೋಲಾ ಮಾರ್ಗವಾಗಿ ೨೪ ಕಿ.ಮೀ ದೂರದಲ್ಲಿ ಡಬ್ಬು ಮಲಗಿಸಿದ ಹಡಗಿನ ಆಕಾರದಲ್ಲಿದ್ದು ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ. ಇವೇ ಅಲ್ಲದೇ ಅಂಕೋಲಾದಲ್ಲಿರುವ ಮಹಾಮಾಯಾ ದೇವಾಲಯ, ವೆಂಕಟರಮಣ ದೇವಾಲಯ, ಮಾಂಗಟೇ ಗುಡ್ಡ ಇವೆಲ್ಲವೂ ಪ್ರವಾಸಿಗರ ಆಕರ್ಷಣೀಯ ಕೇಂದ್ರಗಳಾಗಿವೆ.

**ಕುಮಟಾ**

**ದೂರ ಎಷ್ಟು?**
ತಾಲೂಕು : ಕುಮಟಾ
ತಾಲೂಕಿನಿಂದ : ೨೪ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೭೬ ಕಿ.ಮೀ


ಭೈರವೇಶ್ವರ ಶಿಖರ

**ಯಾಣ :** ಕುಮಟಾ ತಾಲ್ಲೂಕಿನ ಸುಪ್ರಸಿದ್ಧ ಚಾರಣ ಸ್ಥಳ.

ಕುಮಟಾದಿಂದ ೨೪ ಕಿ.ಮೀ.ದೂರದಲ್ಲಿ ದೇವಿಮನೆ ಮತ್ತು ವಡ್ಡಿ ಪಾಲ್ಸ್ ಮದ್ಯದಲ್ಲಿರುವ ಅತ್ಯಂತ ರಮ್ಯ ತಾಣ. ಹರಿಟೆ ವರೆಗೆ ಸಾಗಿ ಮುಂದೆ ಕಚ್ಚಾ ರಸ್ತೆಯಲ್ಲಿ ಸಾಗಿದರೆ ಯಾಣದ ಹಚ್ಚ ಹಸಿರು ಕಾಡು ನಿಸರ್ಗದ ಸವಿ ಉಣಬಡಿಸುವುದು.

ಜಗನ್ಮೋಹಿನಿ ಶಿಖರ ಇದರ ಎತ್ತರ ೩೦೦ ಅಡಿಗಳು ಇದಕ್ಕೆ ಚಂಡಿಕಾ ದೇವಾಲಯ ಮತ್ತುದುರ್ಗಾ ದೇವಾಲಯ ಎಂದು ಹೆಸರು. ಮುಂದೆ ಸಾಗಿದಾಗ (ಚಿತ್ರದಲ್ಲಿ) ಗೋಚರಿಸುವದು ಭೈರವೇಶ್ವರ ಶಿಖರ. ಈ ಬೃಹತ್ ಬಂಡೆಯ ಒಂದು ಸೀಳು ಯಾಣದ ದೇಗುಲ, ಅಲ್ಲಿರುವವನೆ ಭೈರವೇಶ್ವರ. ೮ ಅಡಿ ಎತ್ತರದಿಂದ ಶಿವನ ತಲೆಯ ಮೇಲೆ ಸದಾ ನೀರು ಸುರಿಯುತ್ತಲಿರುತ್ತದೆ.

**ಗೋಕರ್ಣ**

**ದೂರ ಎಷ್ಟು?**
ತಾಲೂಕು : ಕುಮಟಾ
ತಾಲೂಕಿನಿಂದ : ೨೯ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೫೭ ಕಿ.ಮೀ



ಶ್ರೀ ಕ್ಷೇತ್ರ ಗೋಕರ್ಣ

ದಕ್ಷಿಣದ ಕಾಶಿ ಎಂದು ಪ್ರಖ್ಯಾತಿಯನ್ನು ಹೊಂದಿರುವ ಇದು ಕಾಶಿ ಮತ್ತು ರಾಮೇಶ್ವರಗಳಿಗೆ ಸಮನಾದ ಸಿದ್ಧಿ ಕ್ಷೇತ್ರಗಳಲ್ಲೊಂದು. ಅಗಸ್ತ್ಯ ಮುಂತಾದ ಋಷಿಗಳ ತಪೋ ಭೂಮಿ ಇದಾಗಿತ್ತು. ತ್ರೇತಾಯುಗದಿಂದಲೂ ಈ ಕ್ಷೇತ್ರ ಪ್ರಸಿದ್ಧಿ ಪಡೆದಿದೆ. ಕರ್ನಲ್ ಮೆಕೆಂಜಿ (೧೭೫೪-೧೮೨೧) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಗ್ರಹಿಸಿದ ಕೈಫಿಯತ್ತಿನಲ್ಲಿ ಗೋಕರ್ಣ ಕ್ಷೇತ್ರದ ಮಹಿಮೆ ಇದೆ.

ರಾವಣ ಉಗ್ರ ತಪಸ್ಸನ್ನು ಆಚರಿಸಿ ಶಿವನಿಂದ ಪಡೆದ ಆತ್ಮಲಿಂಗವನ್ನು ಒಯ್ಯುತ್ತಿರುವಾಗ ಗಣಪತಿ ಉಪಾಯದಿಂದ ಇಲ್ಲಿ ಪ್ರತಿಷ್ಠಾಪಿಸಿದನೆಂದು ಸ್ಥಳಪುರಾಣವಿದೆ. ಇದರಿಂದಾಗಿಯೇ ಈ ಸ್ಥಳಕ್ಕೆ ಭೂಕೈಲಾಸ ಎಂಬ ಹೆಸರು ಬಂತು. ಸೀತೆ, ಲಕ್ಷ್ಮಣ ಇವರೊಂದಿಗೆ ರಾಮ ಇಲ್ಲಿಗೆ ಬಂದು ಶಿವನನ್ನು ಆರಾಧಿಸಿ ತೀರ್ಥವನ್ನು ಕಲ್ಪಿಸಿದನೆಂಬುದು ಇನ್ನೊಂದು ಐತಿಹ್ಯ. ಗೋಕರ್ಣದ ನೆಲ ಆಕಳ ಕರ್ಣದಂತೆ (ಕಿವಿ) ಇರುವುದರಿಂದ ಗೋಕರ್ಣ ಎಂಬ ಹೆಸರು ಬಂತೆಂದು ಹೇಳಲಾಗಿದೆ. ಗೋಕರ್ಣದಲ್ಲಿ ಅನೇಕ ದೇವ ದೇವತೆಗಳ ಗುಡಿಗಳಿವೆ. ಇಲ್ಲಿಯ ವಿಶೇಷ ಆಕರ್ಷಣೆ, ಗೋಕರ್ಣದ ಮಹಾಬಲೇಶ್ವರ ದೇವಾಲಯದ ಸಭಾಮಂಟಪದಲ್ಲಿರುವುದು ಪಾರ್ವತಿ, ನಂದಿ ಮತ್ತು ಗಣಪತಿಯ ಮೂರ್ತಿಗಳು. ಗಣಪತಿ ದೇವರ ಗರ್ಭಗುಡಿಯ ಮೇಲೆ ಅಷ್ಟದಿಕ್ಪಾಲಕರು, ನಾಗ ಮತ್ತು ದಶಾವತಾರ ಪಡೆದು ಸ್ಥಾಪಿಸಿದ ಆತ್ಮಲಿಂಗ ಸಾಲಿಗ್ರಾಮ ಪೀಠದ ಮಧ್ಯದಲ್ಲಿದೆ. ನಮಗೆ ತೋರುವುದು ಅಂಗುಷ್ಟಗಾತ್ರದ ಲಿಂಗ ಮಾತ್ರ. ಮಹಾಬಲೇಶ್ವರ ದೇವಾಲಯದಲ್ಲಿ ಸುಂದರ ಶಿಲ್ಪಗಳೂ ಇವೆ.

ಊರೊಳಗಿನ ಕೋಟಿತೀರ್ಥ ಒಂದು ದೊಡ್ಡ ಕೆರೆ. ಕೆರೆಯ ಮಧ್ಯದಲ್ಲಿರುವುದು ಸಪ್ತಕೋಟೇಶ್ವರ ಲಿಂಗ. ಹಿಂದೆ ಅದರ ಎದುರು ಎರಡು ಸಂದಿಗಳಿದ್ದವು. ಕೆರೆಯ ಸುತ್ತಲೂ ದೇವದೇವತೆಗಳ ಗುಡಿಗಳಿವೆ. ದಕ್ಷಿಣಕ್ಕೆ ಕಾಲಭೈರವ, ಪೂರ್ವದಲ್ಲಿ ಶಂಕರ ನಾರಾಯಣ ದೇವಾಲಯಗಳಿವೆ. ಆಗ್ನೇಯದಲ್ಲಿ ಪಟ್ಟದ ವಿನಾಯಕ ಇದ್ದಾನೆ. ದಕ್ಷಿಣ ಮತ್ತು ಉತ್ತರದಲ್ಲಿ ಸ್ವರ್ಣವಳ್ಳಿ ಮತ್ತು ರಾಮಚಂದ್ರಾಪುರ ಮಠಗಳಿವೆ. ಗೋಕರ್ಣ ಗ್ರಾಮದ ಅಧಿದೇವತೆ ಭದ್ರಕಾಳಿ ಗೋಕರ್ಣ ಪ್ರವೇಶಿಸುವಾಗಲೇ ಈ ಗುಡಿ ಕಾಣಿಸುವುದು. ಈ ದೇವಿಗೆ ದಸರೆಯಲ್ಲಿ ವಿಶೇಷ ಉತ್ಸವ. ಇಲ್ಲಿ ನಡೆಯುವ ಅಮ್ಮ ನವರ ಕಲಶ, ಬಂಡಿ ಹಬ್ಬ ವಿಶೇಷವಾದದ್ದು.

**ಬೀಚ್**

**ದೂರ ಎಷ್ಟು?**
ತಾಲೂಕು : ಕುಮಟಾ
ತಾಲೂಕಿನಿಂದ : ೩೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೫೭ ಕಿ.ಮೀ



ಗೋಕರ್ಣದಲ್ಲಿ ಮನಮೋಹಕವಾದ ಐದು ಸಮುದ್ರ ಕಿನಾರೆಗಳನ್ನು (ಬೀಚ್) ಕಾಣಬಹುದಾಗಿದೆ. ಗೋಕರ್ಣ ಬೀಚ್, ಗೋಕರ್ಣದಿಂದ ೩ ಕಿ.ಮೀ ದೂರದಲ್ಲಿ ಕೂಡ್ಲೆ ಬೀಚ್, ೫ ಕಿ.ಮೀ ದೂರದಲ್ಲಿ ದೇವನಾಗರಲಿಪಿಯ ಓಂ ಅಕ್ಷರದಂತೆ ಕಾಣುವ ಸುಂದರ ಮನಮೋಹಕ ಓಂ ಬೀಚ್, ಅರ್ಧ ಚಂದ್ರನಂತೆ ಕಾಣುವ ಹಾಫ್ ಮೂನ್ ಬೀಚ್, ಸ್ವರ್ಗದಂತಿರುವ ಪ್ಯಾರಾಡಾಯ್ಸ ಬೀಚ್ ಹೀಗೆ ಬೀಚ್‌ಗಳ ಸಾಲೇ ಇದೆ. ಇಲ್ಲಿಗೆ ಬಹಳಷ್ಟು ವಿದೇಶಿ ಪ್ರವಾಸಿಗರೂ ಭೇಟಿ ನೀಡುತ್ತಾರೆ.

**ಮಿರ್ಜಾನ ಕೋಟೆ**

**ದೂರ ಎಷ್ಟು?**
ತಾಲೂಕು : ಕುಮಟಾ
ತಾಲೂಕಿನಿಂದ : ೧೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೫೮ ಕಿ.ಮೀ



ಪುರಾಣದಲ್ಲಿ ಈ ಊರಿಗೆ ಇದ್ದ ಹೆಸರು ಮಿಡಜಿ. ಇಂಗ್ಲೀಷರು ಕರೆದದ್ದು ಮಿರಜಿ, ಬಿಜಾಪುರದ ಸುಲ್ತಾನ ನಿರ್ಮಿಸಿದ ಕೋಟೆಯೊಂದು ಇಲ್ಲಿದೆ. ಸರ್ಪಮಲ್ಲಿಕ ಎಂಬುವನು ಇದನ್ನು ಗೆದ್ದುಕೊಂಡು ಅಂಕೋಲೆಯವರೆಗಿನ ಪ್ರದೇಶವನ್ನು ಆಳಿದ. ಸರ್ಪಮಲ್ಲಿಕನಿಗೆ ಸಂಬಂಧಿಸಿದಂತೆ ಇಲ್ಲೊಂದು ದಂತ ಕಥೆಯಿದೆ.

ಅವನು ಈ ಕೋಟೆಯನ್ನುಕಟ್ಟಿಸಿ ಅದಕ್ಕೆ ಮೇರಿಜಾನ್ ಎಂದು ಹೆಸರಿಟ್ಟನೆಂದೂ, ಮುಂದೆ ಅದು ರೂಪಾಂತರಗೊಂಡು ಮಿರ್ಜಾನ ಆಯಿತೆಂದೂ ಹೇಳಲಾಗಿದೆ.

**ಇತರ ಪ್ರೇಕ್ಷಣೀಯ ಸ್ಥಳಗಳು :**

**ಬಾಡ :** ಇಲ್ಲಿ ಕಾಂಚಿಕಾಪರಮೇಶ್ವರಿ ದೇವಾಲಯ ಸಮುದ್ರದ ತಟದಿಂದ ಎತ್ತರದಲ್ಲಿದೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಆಗುವ ತೇರು ಪ್ರಸಿದ್ಧ.

**ಸಾಣಿಕಟ್ಟಾ :** ಬೃಹತ್ ಪ್ರಮಾಣದಲ್ಲಿ ಉಪ್ಪು ತಯಾರಿಸುತ್ತಾರೆ. ಇದು ಕರ್ನಾಟಕದಲ್ಲೇ ಉಪ್ಪು ತಯಾರಿಕೆಯ ಬಹುದೊಡ್ಡ ಕೇಂದ್ರ.

**ತದಡಿ:** ಕುಮಟಾದಿಂದ ೨೯ ಕಿ.ಮೀ ದೂರದಲ್ಲಿರುವ ತದಡಿ ಸಣ್ಣ ಮೀನುಗಾರಿಕಾ ಬಂದರು, ಅಘನಾಶಿನಿ ನದಿಯು ಸಂಗಮಿಸುವ ಈ ಪ್ರದೇಶ ಅತ್ಯಂತ ರಮ್ಯವಾದ ತಾಣ

**ಮೇದಿನಿ ಕೋಟೆ :** ಸಾಂತಗಲ್‌ನ ಆಗ್ನೇಯಕ್ಕೆ ೧೮ ಕಿ.ಮೀ ಚೂರದಲ್ಲಿದೆ. ದಟ್ಟ ಅರಣ್ಯದಲ್ಲಿರುವ ಇಲ್ಲಿ ಶಿಲಾ ಶಾಸನಗಳು ಇವೆ. ಹಲವಾರು ಔಷಧಿ ಸಸ್ಯಗಳು ಇಲ್ಲಿವೆ. ದೊರೆಯುತ್ತದೆ.

**ಹೊನ್ನಾವರ**

**ದೂರ ಎಷ್ಟು?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೧೮ಕಿ.ಮೀ
ಜಿಲ್ಲಾಕೇಂದ್ರದಿಂದ: ೧೦೮ಕಿ.ಮೀ.



ಶ್ರೀ ಕ್ಷೇತ್ರ ಇಡಗುಂಜಿ

ಹೊನ್ನಾವರ ತಾಲೂಕಿನಲ್ಲಿರುವ ಇಡಗುಂಜಿಯು, ಶ್ರೀ ಮಹಾಗಣಪತಿ ದೇವರ ಪ್ರಸಿದ್ಧ ತಾಣ. ಇಡಗುಂಜಿ ,ಇಡಕುಂಜ ಮತ್ತು ಕುಂಜವನ ಎಂಬ ಹೆಸರುಗಳಿಂದಲೂ ಪುರಾಣ ಪ್ರಸಿದ್ಧ.

ಸ್ಥಳದಲ್ಲೇ ದೊರೆತ ಕ್ರಿ.ಶ ೧೪೪೮ ರ ಶಾಸನದಲ್ಲಿ ಇಡುಗುಂಜಿ ಎಂದೂ, ಇನ್ನೊಂದು ಶಾಸನದಲ್ಲಿ ಯಿಡುಗುಂದಿ ಎಂದೂ ಉಲ್ಲೇಖಿಸಲಾಗಿದೆ. ಹೀಗೆ ಚಾರಿತ್ರಿಕ ದಾಖಲೆಗಳಲ್ಲಿ ಉಲ್ಲೇಖಿಸಲ್ಪಟ್ಟ ಈ ಕ್ಷೇತ್ರವು ಕರಾವಳಿ ತೀರದ ಪುರಾತನ ದೇವಾಲಯವಾಗಿದೆ.

ಇಲ್ಲಿಯ ಅಖಂಡ ದ್ವಿಭುಜ ಮಹಾಗಣಪತಿಯ ಮೂರ್ತಿಯು ಭಕ್ತರ ಆಕರ್ಷಣೆಯ ಕೇಂದ್ರ .ಬಲಗೈಯಲ್ಲಿ ತಾವರೆಯ ಮೊಗ್ಗು, ಎಡಗೈಯಲ್ಲಿ ಮೋದಕ ಧರಿಸಿರುವ ಗಣಪತಿಯ ದರ್ಶನಕ್ಕೆ ನಿತ್ಯವೂ ದೂರದ ಊರುಗಳಿಂದ ಭಕ್ತಾದಿಗಳು ಆಗಮಿಸುತ್ತಾರೆ. ತ್ರೇತಾ ಯುಗದಲ್ಲಿ ನಾರದರಿಂದ ಪ್ರತಿಷ್ಠಾಪಿಸಲ್ಪಟ್ಟು ಇಂದಿನವರೆಗೂ ಐತಿಹಾಸಿಕ ಅಂಶಗಳನ್ನು ಕಾಲಕಾಲಕ್ಕೆ ಉಳಿಸಿಕೊಂಡು ಬಂದಿದೆ. ಪ್ರತಿವರ್ಷ ರಥಸಪ್ತಮಿಯಂದು ಇಲ್ಲಿ ಜಾತ್ರೆ ನಡೆಯುತ್ತದೆ. ಭಾದ್ರಪದ ಶುಕ್ಲ ಚವತಿಯಂದು ಇಲ್ಲಿ ವಿಶೇಷ ಉತ್ಸವವೂ ನಡೆಯುತ್ತದೆ.

**ಅಪ್ಸರಕೊಂಡ ಜಲಪಾತ**

**ದೂರ ಎಷ್ಟು?**
ತಾಲೂಕು : ಹೊನ್ನಾವರ
ತಾಲೂಕು ಕೇಂದ್ರದಿಂದ :೮ ಕಿ.ಮೀ
ಜಿಲ್ಲಾ ಕೇಂದ್ರದಿಂದ: ೯೮ ಕಿ.ಮೀ





ಸುರಂಗ ಮಾರ್ಗವಾಗಿ ಬರುತ್ತಿರುವ ಕೊಂಕಣ ರೈಲು

"ಹೊನ್ನಾವರದ ದಕ್ಷಿಣಕ್ಕೆ ಸಮುದ್ರದ ಅಬ್ಬರಕ್ಕೆ ತಾನೂ ದನಿಗೂಡುತ್ತಿದೆಯೇನೊ ಎನ್ನುವಂತೆ ಎತ್ತರದಿಂದ ನೀರು ಧುಮುಕುವ ಸ್ಥಳವೇ ಅಪ್ಸರಕೊಂಡ. ಅಪ್ಸರೆಯರು ಸ್ನಾನ ಮಾಡಿದ ಸರೋವರ ಇದಾದ ಕಾರಣ ಅಪ್ಸರಕೊಂಡವೆಂಬ ಹೆಸರು ಬಂದಿತೆಂದು ಕಥೆ ಇದೆ.

ಇಲ್ಲಿಯ ಗುಡ್ಡದ ಮೇಲೆ ಅನೇಕ ಗುಹೆಗಳಿವೆ. ಅವುಗಳನ್ನು ಪಾಂಡವರ ಗುಹೆಗಳೆಂದು ಕರೆಯುತ್ತಾರೆ. ಕಣ್ಮನಸೆಳೆಯುವ ನೀರಧಾರೆ, ಸೂರ್ಯಾಸ್ತದ ಹೊಂಬೆಳಕಿನ ರಮಣೀಯ ದೃಶ್ಯ, ಪ್ರವಾಸಿಗರನ್ನಾಕರ್ಷಿಸುವ ವಿಶಾಲವಾಗಿ ಹರಡಿಕೊಂಡಿರುವ ಸಮುದ್ರ ತೀರದ ಸೌಂದರ್ಯ ಸವಿಯುವ ಸುಂದರ ತಾಣ ಇದು.

**ಗೇರುಸೊಪ್ಪ :**

**ದೂರ ಎಷ್ಟು ?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೨೪ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೨೨ ಕಿ.ಮೀ.



ಜೈನ ಬಸದಿ - ಗೇರುಸೊಪ್ಪ

ಕಾಡಿನಿಂದ ನಿಬಿಡವಾಗಿ ಶೋಭಿಸುವ ಗೇರುಸೊಪ್ಪೆಯು, ಹೊನ್ನಾವರ ತಾಲೂಕಿನಲ್ಲಿ ಇತಿಹಾಸದ ಪ್ರಾಮುಖ್ಯತೆಯನ್ನು ಪಡೆದ ಅತ್ಯಂತ ಶ್ರೇಷ್ಠ ಸ್ಥಳವಾಗಿದೆ. ಕ್ರಿ.ಶ. ೧೪೦೯ ರಿಂದ ೧೬೧೦ರವರೆಗೆ ಗೇರುಸೊಪ್ಪೆಯು ಜೈನ ಅರಸರ ರಾಜಧಾನಿಯಾಗಿತ್ತು. ರಾಣಿ ಚೆನ್ನಭೈರಾದೇವಿ ಮೆಣಸಿನಕಾಳಿನ ರಾಣಿಯೆಂದೇ ಪ್ರಸಿದ್ಧಿ ಪಡೆದಿದ್ದಳು. ಕಲೆ, ಸಾಹಿತ್ಯ, ಧರ್ಮ ಸಂಸ್ಕೃತಿಯ ನೆಲೆವೀಡಾಗಿ ಮೆರೆದ ಪ್ರದೇಶ ಇದಾಗಿದೆ. ಗೇರುಸೊಪ್ಪೆಯಿಂದ ಸುಮಾರು ೨ ಕಿ.ಮೀ ಅಂತರದಲ್ಲಿ ಚತುರ್ಮುಖ ಬಸದಿ ಇದೆ. ಕರ್ನಾಟಕದ ಶಿಲ್ಪಕಲಾ ಕ್ಷೇತ್ರಕ್ಕೆ ಇದೊಂದು ಅತ್ಯುಚ್ಚ ಕೊಡುಗೆಯಾಗಿದೆ.

ಈ ಬಸದಿಗೆ ೪ ದಿಕ್ಕುಗಳಲ್ಲಿಯೂ ಬಾಗಿಲುಗಳಿವೆ. ಅಲ್ಲದೇ ೪ ದಿಕ್ಕುಗಳಲ್ಲಿಯೂ ಹೆಬ್ಬಾಗಿಲು, ಹೆಬ್ಬಾಗಿಲುಗಳ ಎಡ ಬಲ ಗೋಡೆಗಳಲ್ಲಿ ಒಂದೇ ತೆರನಾದ ಶಿಖರಗಳುಳ್ಳ ಮಂಟಪಗಳು ಆಕರ್ಷಕ ಕೆತ್ತನೆಯಿಂದ ಮನಸೆಳೆಯುತ್ತವೆ.

ಗೇರುಸೊಪ್ಪದ ಸಮೀಪದ ಹೈಗುಂದ ಹೊನ್ನಾವರ ತಾಲೂಕಿನ ಇತಿಹಾಸದ ದೃಷ್ಟಿಯಿಂದ ಅತೀ ಪ್ರಾಚೀನ ಸ್ಥಳ ಎಂದು ಹೆಸರಾದದ್ದು. ನಡುಗಡ್ಡೆಯಾಗಿರುವ ಇಲ್ಲಿಯ ಕಲಾತ್ಮಕವಾದ ಯಕ್ಷ ಶಿಲ್ಪ ಶೈಲಿಯನ್ನು ನೋಡಿದರೆ ಹತ್ತನೆಯ ಶತಮಾನಕ್ಕಿಂತ ಹಿಂದಿನದ್ದಿರಬೇಕು ಎನ್ನುತ್ತಾರೆ.

ಗೇರುಸೊಪ್ಪದ ಸಮೀಪವಿರುವ ಬಂಗಾರಮಕ್ಕಿಯ ವೀರಾಂಜನೇಯ ದೇವಾಲಯವೂ ಸಹ ಮುಖ್ಯವಾದ ಕ್ಷೇತ್ರವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುವ ಕೇಂದ್ರವಾಗಿದೆ.

**ಶರಾವತಿ ಟೇಲರಿಸ್: ಗೇರಸಪ್ಪಾ ಡ್ಯಾಮ್**

**ದೂರ ಎಷ್ಟು ?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೩೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೨೦ ಕಿ.ಮೀ



ಜೋಗಜಲಪಾತವಾಗಿ ಧುಮುಕುವ ಶರಾವತಿ, ಮಹಾತ್ಮಾಗಾಂಧಿ ವಿದ್ಯುದ್ದಾ ಗರದಲ್ಲಿ ವಿದ್ಯುತ್ ಉತ್ಪಾದನೆಯ ನಂತರ ಹರಿದು ಬರುವ ನೀರನ್ನು ಗೇರುಸೊಪ್ಪ ಸಮೀಪ ಆಣೆಕಟ್ಟಿನಲ್ಲಿ ಸಂಗ್ರಹಿಸಿ ಪುನಃ ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತದೆ.

**ರಾಮತೀರ್ಥ**

**ದೂರ ಎಷ್ಟು?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೩ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೮೭ ಕಿ.ಮೀ



ಹೊನ್ನಾವರದಿಂದ ಈಶಾನ್ಯಕ್ಕೆ ಎರಡು ಮೈಲಿ ದೂರದಲ್ಲಿರುವ ರಾಮತೀರ್ಥವು ಪವಿತ್ರವಾದ ತೀರ್ಥಕ್ಷೇತ್ರವಾಗಿದೆ. ಮಳೆಗಾಲ ಬೇಸಿಗೆ ಕಾಲವೆನ್ನದೆ ಎಲ್ಲಾ ಕಾಲಗಳಲ್ಲೂ ಗುಡ್ಡದೊಳಗಿನಿಂದ ರಭಸವಾಗಿ ಹರಿದು ಬರುವ ಎರಡು ನೀರಿನ ಧಾರೆಗಳಿವೆ. ದೊಡ್ಡ ನೀರಿನ ಧಾರೆಯನ್ನು ರಾಮತೀರ್ಥವೆಂದೂ, ಚಿಕ್ಕದನ್ನು ಲಕ್ಷ್ಮಣತೀರ್ಥವೆಂದೂ ಕರೆಯುತ್ತಾರೆ.

**ಕರಿಕಾನಮ್ಮ**

**ದೂರ ಎಷ್ಟು?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೧೬ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೧ ಕಿ.ಮೀ



ಹೊನ್ನಾವರದಿಂದ ಈಶಾನ್ಯಕ್ಕೆ ಸುಮಾರು ಏಳು ಮೈಲಿ ಅಂತರದಲ್ಲಿ ನೂರಾರು ಅಡಿ ಎತ್ತರದ ಬೆಟ್ಟದ ಮೇಲೆ ಇರುವ ಕರಿಕಾನ ಪರಮೇಶ್ವರಿ ದೇವಾಲಯವು ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ದವಾಲಯದ ಎದುರು ನಿಂತರೆ ಕಡಲ ತೀರದ ರಮ್ಯನೋಟವು ನೋಡುವ ಕಣ್ಣುಗಳಿಗೆ ಆನಂದದ ಹಬ್ಬವನ್ನುಂಟು ಮಾಡುತ್ತದೆ. ಅಷ್ಟು ಎತ್ತರದ ಶಿಖರದ ಮೇಲೂ ಸವಿಯಾದ, ತಂಪಾದ ನೀರಿರುವುದು ಇನ್ನೊಂದು ಸೋಜಿಗದ ಸಂಗತಿ.

## ಟಿಬೇಟಿಯನ್ ಕಾಲೋನಿ

**ದೂರ ಎಷ್ಟು?**
ತಾಲೂಕು : ಮುಂಡಗೋಡು
ತಾಲೂಕಿನಿಂದ : ೬ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೭೪ ಕಿ.ಮೀ


ಟಿಬೇಟಿಯನ್ ಕಾಲೋನಿ


ಬಾಚಣಕಿ ಜಲಾಶಯ

ಪ್ರಶಾಂತ ವಿಶಾಲ ವಾತಾವರಣವಿರುವುದರಿಂದ ಜನಾಕರ್ಷಕವಾಗಿದೆ.ಈ ತಾಲೂಕಿನ ಜನ ಜೀವನ ಸ್ವಲ್ಪ ಪ್ರಮಾಣದಲ್ಲಿ ಟಿಬೇಟಿಯನ್ನರ ಜನ ಜೀವನದ ಪ್ರಭಾವಕ್ಕೆ ಒಳಗಾಗಿದೆ. ಇದು ಮುಂಡಗೋಡ ತಾಲೂಕಿನಲ್ಲಿ ವಿಶೇಷ ಪ್ರೇಕ್ಷಣೀಯ ಸ್ಥಳ.

೧೯೬೧ರಲ್ಲಿ ಚೀನಾದ ಟಿಬೇಟನಿಂದ ಬಂದ ಜನರು ಸುಮಾರು ೯ ಕ್ಯಾಂಪ್‌ಗಳಲ್ಲಿ ವಾಸವಾಗಿದ್ದಾರೆ. ಬೌದ್ಧರ ನಳಂದಾ ಮಾದರಿಯ ಅಧ್ಯಯನ ಕೇಂದ್ರ ಇಲ್ಲಿದೆ. ಪ್ರಾರ್ಥನೆ, ಜ್ಞಾನಗೋಷ್ಠಿ, ಜ್ಞಾನಾರ್ಜನೆ, ಅಧ್ಯಯನಗಳು ಇಲ್ಲಿ ಸದಾ ನಡೆಯುತ್ತಿರುತ್ತವೆ.

## ಚೌಡಳ್ಳಿಯ ಆಲದಮರ


**ಚೌಡಳ್ಳಿಯ ಆಲದಮರ :**

ಚೌಡಳ್ಳಿಯ ಆಲದಮರ ಸುಮಾರು ೧ ಎಕರೆ ಪ್ರದೇಶವನ್ನು ಆವರಿಸಿದೆ. ತಾಲೂಕಿನಲ್ಲಿ ಒಂದು ಎಕರೆ ವಿಸ್ತಾರವುಳ್ಳ ಅತ್ಯಂತ ಪುರಾತನ, ಇತಿಹಾಸ ಇರುವ ಈ ಆಲದ ಮರ ಪ್ರವಾಸಿಗರಿಗೆ ಕೈ ಬೀಸಿ ಕರೆಯುತ್ತದೆ. ಇದೊಂದು ವಿಶ್ರಾಂತಿ ಧಾಮ ಆಗಿದೆ.

**ತಾಲೂಕಿನ ಇತರ ಪ್ರವಾಸೀ ಸ್ಥಳಗಳು :**



ಡೊಳ್ಳು ಕುಣಿತ

ಚಿಗಳ್ಳಿ ದೀಪನಾಥೇಶ್ವರ, ಖಾದಲಿಂಗ ದೇವಾಲಯ ಮುಂಡಗೋಡ, ಆಂಜನೇಯ ದೇವಾಲಯ, ರಾಮಲಿಂಗೇಶ್ವರ ದೇವಾಲಯ ಬೆಡಸಗಾಂವ, ಮಳಗಿ ಜಲಾಶಯ, ಬಾಚಣಕಿ ಜಲಾಶಯ, ಮಳಗಿ ಗ್ರಾಮ ದೇವಾಲಯ.

**ಹಳಿಯಾಳ :**

**ದೂರ ಎಷ್ಟು?**
ತಾಲೂಕು : ಹಳಿಯಾಳ
ತಾಲೂಕಿನಿಂದ : ೧.೫ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೩೦ ಕಿ.ಮೀ.




ಹಳಿಯಾಳ ಕೋಟೆ

ಹಳಿಯಾಳ ಪಟ್ಟಣದ ಹತ್ತಿರ ಶಿವಾಜಿ ಮಹಾರಾಜನ ಕಾಲದ ಇತಿಹಾಸವನ್ನು ಸಾರುವ ಈ ಕೋಟೆ ಇದೆ. ಇದು ಐತಿಹಾಸಿಕ ಸ್ಮಾರಕವಾಗಿದೆ. ಆ ಕಾಲದ ರಾಜರ ಆಡಳಿತಾವಧಿಯ ಅನೇಕ ಕುರುಹುಗಳನ್ನು ಈಗಲೂ ಇಲ್ಲಿ ಕಾಣಬಹುದು.

**ಸೈಕ್ಸ ಪಾಯಿಂಟ್ :**

**ದೂರ ಎಷ್ಟು?**
ತಾಲೂಕು : ಹಳಿಯಾಳ

ತಾಲೂಕಿನಿಂದ : ೪೨ ಕಿ.ಮೀ.
ಜಿಲ್ಲಾ ಕೇಂದ್ರದಿಂದ : ೧೨೦ ಕಿ.ಮೀ.



ಬ್ರಿಟಿಷ್ ಅಧಿಕಾರಿಯಾಗಿದ್ದ ಸೈಕ್ಸನಿಂದಾಗಿ ಈ ಸ್ಥಳಕ್ಕೆ ಆ ಹೆಸರು ಬಂದಿರುವುದಾಗಿ ತಿಳಿದುಬರುತ್ತದೆ. ಇಲ್ಲಿಂದ ತಳುಕು ಬಳುಕಿನೊಂದಿಗೆ ಹರಿಯುವ ಕಾಳಿ ಕಣಿವೆಯ ರಮಣೀಯ ದೃಶ್ಯವನ್ನು ಸವಿಯಬಹುದಾಗಿದೆ. ಕಣಿವೆಯ ಬುಡದಲ್ಲಿರುವ ನಾಗಝರಿ ವಿದ್ಯುದಾಗಾರವನ್ನೂ ಕೂಡ ನೋಡಬಹುದು.

## ದಾಂಡೇಲಿ

**ದೂರ ಎಷ್ಟು?**
ತಾಲೂಕು : ಹಳಿಯಾಳ
ತಾಲೂಕಿನಿಂದ : ೨೫ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೫ ಕಿ.ಮೀ



ದಾಂಡೇಲಿ ಅಭಯಾರಣ್ಯವು ೧೯೫೮ರಲ್ಲಿ ಸ್ಥಾಪನೆ ಆಯಿತು. ತನ್ನ ಪ್ರಾಕೃತಿಕ ಸೌಂದರ್ಯದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಒಂದು ಅಪೂರ್ವ ಸೌಂದರ್ಯಧಾಮ ಎಂಬ ಹೆಸರು ಪಡೆದಿದೆ. ಈ ಅಭಯಾರಣ್ಯವು ವನ್ಯಮೃಗಗಳ ರಕ್ಷಣಾ ಕೇಂದ್ರವಾಗಿದೆ.

ಇಲ್ಲಿನ ನೈಸರ್ಗಿಕ ಸಂಪತ್ತು ಅನೇಕ ಉದ್ದಿಮೆಗಳ ಉಗಮಕ್ಕೆ ಕಾರಣವಾಗಿದೆ.ಇವುಗಳಲ್ಲಿ ದಾಂಡೇಲಿಯ ವೆಸ್ಟ್-ಕೋಸ್ಟ್ ಪೇಪರ್ ಮಿಲ್, ರಾಜ್ಯದ ಪ್ರಮುಖ ಕೈಗಾರಿಕೆಗಳಲ್ಲಿ ಒಂದಾಗಿದೆ. ಹಳಿಯಾಳದ ಸುತ್ತ ಮುತ್ತ ಬಿದಿರಿನ ಬೆಳೆ ಅಗಾಧವಾಗಿದೆ.

ಈ ನೈಸರ್ಗಿಕ ಸಂಪನ್ಮೂಲವು ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ದಾಂಡೇಲಿಯ ಜೀವನಾಡಿಗೆ ಬದುಕನ್ನು ಕಲ್ಪಿಸಿಕೊಡುವ ಈ ಕಾರ್ಖಾನೆ ವರವಾಗಿ ಪರಿಣಮಿಸಿದೆ.

ಹಳಿಯಾಳದಲ್ಲಿ ಸಕ್ಕರೆ ಕಾರ್ಖಾನೆಯು ಇದ್ದು ನಗರವು ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ.

**ಪೇಪರ್ ಮಿಲ್**

**ದೂರ ಎಷ್ಟು?**
ತಾಲೂಕು : ಹಳಿಯಾಳ
ತಾಲೂಕಿನಿಂದ : ೨೫ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೫ ಕಿ.ಮೀ



**ತುಳಜಾ ಭವಾನಿ ದೇವಾಲಯ :**

**ದೂರ ಎಷ್ಟು?**
ತಾಲೂಕು : ಹಳಿಯಾಳ
ತಾಲೂಕಿನಿಂದ : ೧.೫ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೩೦ ಕಿ.ಮೀ.



ಶ್ರೀ ದೇವಿಯ ನ್ನಿದಾನ ಆಸ್ತಿಕರ ಪವಿತ್ರ ಶೃದ್ದಾ ಕೇಂದ್ರವಾಗಿದೆ. ಈ ಸುಂದರ ದೇವಾಲಯವನ್ನು ೧೯೯೬ರಲ್ಲಿ ಪ್ರತಿಷ್ಠಾಪಿಸಲಾಯಿತು. ನಾಲ್ಕು ಅಡಿ ಎತ್ತರದ ಕಪ್ಪು ಕಲ್ಲಿನ ಭವಾನಿ ದೇವಿಯ ಮೂರ್ತಿ ಇಲ್ಲಿನ ಪ್ರಮುಖ ಆಕರ್ಷಣೆ.

ಶಿಲ್ಪಕಲೆಯ ನಾಡಾದ ಕೋಲಾರ ಜಿಲ್ಲೆಯಿಂದ ಮೂರ್ತಿಯನ್ನು ಇಲ್ಲಿಗೆ ತರಲಾಗಿದೆ. ಕರ್ನಾಟಕದಿಂದ ಅಷ್ಟೇ ಅಲ್ಲದೇ ಮಹಾರಾಷ್ಟ್ರ ಹಾಗೂ ಗೋವಾದಿಂದಲೂ ದಿನನಿತ್ಯ ಸಾವಿರಾರು ಭಕ್ತಾದಿಗಳು ಇಲ್ಲಿಗೆ ಬರುತ್ತಾರೆ.

**ಜೊಯಿಡಾ :**

**ದೂರ ಎಷ್ಟು ?**
ತಾಲೂಕು : ಜೊಯಿಡಾ
ತಾಲೂಕಿನಿಂದ : ೨೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೬ ಕಿ.ಮೀ



ಕಾನೇರಿ ನದಿಯು ಕಾಳಿಯ ಮುಖ್ಯವಾಹಿನಿಗೆ ಸೇರುವ ಮುನ್ನ ಎತ್ತರದಿಂದ ವೇಗವಾಗಿ ಧುಮ್ಮಿಕ್ಕುತ್ತದೆ. ವೇಗವಾದ ನೀರಿನ ಹರಿವು ಕಲ್ಲಿನ ಅನೇಕ ಗುಹೆಗಳನ್ನು ನಿರ್ಮಿಸಿವೆ. ಇಂತಹ ಕಲ್ಲುಗಳ ಮೂಲಕ ನೀರು ಧುಮುಕುವುದನ್ನು ನೋಡುವುದು ವಿಸ್ಮಯಕಾರಿಯಾಗಿದೆ. ಈ ದೃಶ್ಯ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಹತ್ತಿರದಲ್ಲಿ ಪುರಾಣಪ್ರಸಿದ್ಧ ಕವಳ ಗುಹೆ ಇದೆ.

**ದೂದ್ ಸಾಗರ್** :

**ದೂರ ಎಷ್ಟು ?**
ತಾಲೂಕು : ಜೊಯಿಡಾ
ತಾಲೂಕಿನಿಂದ : ೭೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೫೦ ಕಿ.ಮೀ


ದೂದ್ ಸಾಗರ

ಕ್ಯಾಸಲ್‌ರಾಕ್ ಇದು ಗೋವಾದ ಗಡಿಯಂಚಿನಲ್ಲಿರುವ ಜೋಯಿಡಾದ ಒಂದು ಪುಟ್ಟ ಊರು. ಇಲ್ಲಿಂದ ೧೦ ಕಿ.ಮೀ ಅಂತರದಲ್ಲಿ ದಟ್ಟವಾದ ಕಾಡಿನ ಮಧ್ಯದಲ್ಲಿ ಹಾಲಿನಂತೆ ನೊರೆ ನೊರೆಯಾಗಿ ಧುಮುಕುತ್ತಿರುವ ಜಲಪಾತವಿದೆ. ಅದೇ ದೂದ ಸಾಗರ ಫಾಲ್ಸ್. ಇದು ಚಾರಣಿಗರ ಸ್ವರ್ಗದಂತಿದೆ.

**ಉಳವಿ:**

**ದೂರ ಎಷ್ಟು?**
ತಾಲೂಕು : ಜೊಯಿಡಾ
ತಾಲೂಕಿನಿಂದ : ೩೯ ಕಿ.ಮೀ.
ಜಿಲ್ಲಾ ಕೇಂದ್ರದಿಂದ : ೬೦ ಕಿ.ಮೀ.




ಚನ್ನಬಸವೇಶ್ವರ ದೇವಸ್ಥಾನ

ಉಳವಿ ಇತಿಹಾಸ ಪ್ರಸಿದ್ಧ ಸ್ಥಳವಾಗಿದೆ. ಇಲ್ಲಿ ಚನ್ನಬಸವಣ್ಣನ ಸಮಾಧಿಯಿದೆ. ಬಿಜ್ಜಳನ ಮರಣಾನಂತರ ಶರಣರನ್ನು ಕೊಲ್ಲಲು ಕಳಚೂರಿ ರಾಜನು ಆಜ್ಞೆ ಮಾಡಿದಾಗ ಚನ್ನಬಸವಣ್ಣನವರು ಸುಮಾರು ೧೧೬೭ರಲ್ಲಿ ಕಲ್ಯಾಣವನ್ನು ಬಿಟ್ಟು ಇಲ್ಲಿಗೆ ಬಂದಿದ್ದರು. ಇಲ್ಲಿನ ಗವಿಮಠ ಎಂಬಲ್ಲಿ ಅನೇಕ ಗುಹೆಗಳಿಗೆ ಚನ್ನಬಸವಣ್ಣನ ತಾಯಿಯಾದ ಅಕ್ಕ ನಾಗಮ್ಮನ ಹೆಸರನ್ನು ಇಡಲಾಗಿದೆ. ಚನ್ನಬಸವಣ್ಣನ ಸಮಾಧಿ ಇಲ್ಲಿನ ಆಕರ್ಷಕ ರಚನೆ. ಇದರ ಗರ್ಭಗುಡಿಯಲ್ಲಿ ನಂದಿವಿಗ್ರಹವನ್ನು ಸ್ಥಾಪಿಸಲಾಗಿದೆ.

ಪ್ರತಿ ಪೂರ್ಣಿಮೆಯ ದಿನದಂದು ಜಾತ್ರೆ ನಡೆಯುತ್ತಿದ್ದು ಭಾರತ ಹುಣ್ಣಿಮೆ ದಿನದಂದು ದೊಡ್ಡ ಜಾತ್ರೆ ನಡೆಯುತ್ತದೆ.

**ಸೂಪಾ ಆಣೆಕಟ್ಟು :**

**ದೂರ ಎಷ್ಟು?**
ತಾಲೂಕು : ಜೊಯಿಡಾ
ತಾಲೂಕಿನಿಂದ : ೨೦ ಕಿ.ಮೀ.
ಜಿಲ್ಲಾ ಕೇಂದ್ರದಿಂದ : ೧೦೦ ಕಿ.ಮೀ



ಸೂಪಾ ಅಣೆಕಟ್ಟು

ಹುಬ್ಬಳ್ಳಿ-ದಾಂಡೇಲಿ-ಕಾರವಾರ ಮಾರ್ಗ ಮಧ್ಯೆ ದಾಂಡೇಲಿಯಿಂದ ೧೫ ಕಿ.ಮೀ. ದೂರದಲ್ಲಿರುವ ಇದು ಅತೀ ಸಣ್ಣ ಆಣೆಕಟ್ಟು. ದೇಶದ ಅತಿ ದೊಡ್ಡ ಜಲಾಶಯಗಳಲಿ

**ಜಲಸಾಹಸ ಕ್ರೀಡೆ (ರಿವರ್ ರ್‍ಯಾಫ್ಟಿಂಗ್)**

**ದೂರ ಎಷ್ಟು?**
ತಾಲ್ಲೂಕು : ಜೊಯಿಡಾ
ತಾಲೂಕಿನಿಂದ : ೨೦ ಕಿ.ಮೀ.
ಜಿಲ್ಲಾ ಕೇಂದ್ರದಿಂದ : ೧೦೦ ಕಿ.ಮೀ.





ಅಣಸಿ ರಾಷ್ಟ್ರೀಯ ಉದ್ಯಾನವನ

ದಟ್ಟವಾದ ಕಾಡಿನಿಂದ ಆವೃತವಾದ ಜೋಯಿಡಾದ ಗಣೇಶ ಗುಡಿ ಸಮೀಪದ ಜಂಗಲ್ ರೆಸೋರ್ಟ್‌ಗಳು ಪ್ರವಾಸಿಗರನ್ನು ತಮ್ಮೆಡೆಗೆ ಕೈಬೀಸಿ ಕರೆಯುತ್ತವೆ. ಗಣೇಶಗುಡಿ ಆಣೆಕಟ್ಟೆನಿಂದ ನೀರು ಬಿಡುತ್ತಿರುವಾಗ ಅಲ್ಲಿ ನಡೆಸುವ ದೋಣಿ ವಿಹಾರ ಮೈಮನವನ್ನು ರೋಮಾಂಚನಗೊಳಿಸುತ್ತದೆ.

**ವಿಸ್ತೀರ್ಣ**

೧. ಅಂಕೋಲಾ : ೯೧೮.೭ ಚ.ಕಿ.ಮೀ.

೨. ಭಟ್ಕಳ : ೩೪೮.೯ ಚ.ಕಿ.ಮೀ

೩. ಹಳಿಯಾಳ : ೮೪೭.೪ ಚ.ಕಿ.ಮೀ

೪. ಹೊನ್ನಾವರ : ೭೫೪.೮ ಚ.ಕಿ.ಮೀ

೫. ಜೊಯಿಡಾ : ೧೯೨೬.೩ ಚ.ಕಿ.ಮೀ

೬. ಕಾರವಾರ : ೭೩೨.೧ ಚ.ಕಿ.ಮೀ

೭. ಕುಮಟಾ : ೫೮೨.೦ ಚ.ಕಿ.ಮೀ

೮. ಮುಂಡಗೋಡ : ೬೬೮.೩ ಚ.ಕಿ.ಮೀ

೯. ಸಿದ್ದಾಪುರ : ೮೫೫.೩ ಚ.ಕಿ.ಮೀ

೧೦. ಶಿರಸಿ : ೧೩೦೧.೧ ಚ.ಕಿ.ಮೀ

ಜಿಲ್ಲೆಯ ಒಟ್ಟು ವಿಸ್ತೀರ್ಣ : ೧೦೩೨೭ ಚ.ಕಿ.ಮೀ

ದೇಶ ನೋಡು ಕೋಶ ಓದು

(3)

**ಶೃಂಗೇರಿ ಶಂಕರ ಮಠ**

**ದೂರ ಎಷ್ಟು?**
ತಾಲೂಕು : ಸಿದ್ದಾಪುರ
ತಾಲೂಕಿನಿಂದ : ೨ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೪೮ ಕಿ.ಮೀ



ಶೃಂಗೇರಿ ಶಂಕರ ಮಠ

ಸಿದ್ದಾಪುರ-ಕುಮಟಾ ಮಾರ್ಗದಲ್ಲಿರುವ ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಂಡ ಈ ಶೃಂಗೇರಿ ಶಾಖಾ ಮಠ ಬಹಳ ಸುಂದರವಾಗಿದೆ. ಶಾರದೆ, ವಿನಾಯಕ, ಈಶ್ವರ ಮುಂತಾದ ದೇವತೆಗಳ ವಿಗ್ರಹಗಳನ್ನು ಸ್ಥಾಪಿಸಿ ಆಸ್ತಿಕರಿಗೆ ದೈವೀ ಕಾರ್ಯಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಧ್ಯಾನಕ್ಕೆಂದೇ ಶ್ರೀ ಶಂಕರಾಚಾರ್ಯರ ಪ್ರತಿಮೆಯನ್ನಿಟ್ಟು ವಿಶಾಲ ಮಂದಿರವನ್ನು ನಿರ್ಮಿಸಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಸುಂದರವಾದ ಭವ್ಯ, ದಿವ್ಯ ವೇದಿಕೆಯಿದೆ. ಇದು ಭುವನಗಿರಿ ಹಾಗೂ ಬಿಳಗಿಗೆ ತೆರಳುವ ಮಾರ್ಗದಲ್ಲಿಯೇ ಇದೆ.

**ಉಂಚಳ್ಳಿ ಜಲಪಾತ**

**ದೂರ ಎಷ್ಟು?**
ತಾಲೂಕು : ಸಿದ್ದಾಪುರ
ತಾಲೂಕಿನಿಂದ : ೨ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೪೮ ಕಿ.ಮೀ



ಉಂಚಳ್ಳಿ ಜಲಪಾತ

ಸಿದ್ದಾಪುರದಿಂದ ಶಿರಶಿ ಮಾರ್ಗದಲ್ಲಿ ೪.ಕಿ.ಮೀ. ಸಾಗಿ ನಂತರ ಎಡಕ್ಕೆ ತಿರುಗಿ ೩೨ ಕಿ.ಮೀ. ನಷ್ಟು ದೂರದಲ್ಲಿ ಕೋಲಸಿರ್ಸಿ-ಹಾರ್ಸಿಕಟ್ಟ-ಹೆಗ್ಗರಣಿ ಮಾರ್ಗದಲ್ಲಿ ಹೊರಟಾಗ ನಮಗೆ ಈ ಜಲಪಾತದ ದೃಶ್ಯವನ್ನು ನೋಡುವ ಅವಕಾಶ ದೊರಕುತ್ತದೆ. ಅಂತೆಯೇ ಕುಮಟಾ-ಶಿರಸಿ ಮಾರ್ಗದಿಂದ ಬಂದಾಗಲೂ (ಸುಮಾರು ೧೫ ಕಿ.ಮೀ.) ನಮಗೆ ಈ ಜಲಪಾತದ ಸನಿಹ ತಲುಪಲು ಅವಕಾಶವಿದೆ. ಈ ಜಲಪಾತದೆಡೆಗೆ ಸಾಗಿದಾಗ ಅಲ್ಲಲ್ಲಿ ನಿಬಿಡವಾದ ಅರಣ್ಯ, ಹೊಳೆ-ಹಳ್ಳ, ಕೊಳ್ಳ-ಕಂದಕ, ದಿನ್ನೆ-ಗುಡ್ಡಗಳು ಕಾಣಸಿಗುತ್ತವೆ. ಇವೆಲ್ಲವನ್ನು ದಾಟಿ ಜಲಪಾತದ ಸಮೀಪ ಸಾಗಿದಾಗ ಮೈನವಿರೇಳುವ ಅನುಭವ ನಮ್ಮದಾಗುತ್ತದೆ. ಸುಮಾರು ೩೮೦ ಅಡಿಗಳಷ್ಟು ಎತ್ತರದಿಂದ ಭೋರ್ಗರೆವ ನಿನಾದದೊಂದಿಗೆ ಧುಮ್ಮಿಕ್ಕಿ ಹರಿಯುವ ಜಲಧಾರೆಯ ನಯನಮನೋಹರ ದೃಶ್ಯ ಅಧ್ಭುತವಾದುದು.

ಅಘನಾಶಿನಿ ನದಿಯು ಇಲ್ಲಿಂದ ಘಟ್ಟದ ಕೆಳಗಿಳಿದು ಸಾಗರದತ್ತ ಪಯಣವನ್ನು ಬೆಳೆಸುತ್ತದೆ. ಈ ಜಲಪಾತಕ್ಕೆ ‘ಕೆಪ್ಪ ಜೋಗ’ ಎಂಬ ಹೆಸರೂ ರೂಢಿಯಲ್ಲಿದೆ. ಕಟ್ಟಡವಿಯ ಮಧ್ಯದಲ್ಲಿ ನೀರು ಬೀಳುವ ಸ್ಥಳದತ್ತ ಇಳಿದಿಳಿದು ಸಾಗಿದರೆ ಪರಸ್ಪರ ಸಮೀಪ ನಿಂತು ಮಾತನಾಡಿದರೂ ಏನೂ ಕೇಳದ ಅನುಭವ ಇಲ್ಲಿ ಆಗುತ್ತದೆ. ಬ್ರಿಟೀಷ್ ಸಾರ್ಜಂಟ್ ಸರ್ ವೆಲ್ಲಿಂಗ್ಟನ್ ಇಲ್ಲಿಗೆ ಭೇಟಿ ನೀಡಿದ್ದರಿಂದ ಇದಕ್ಕೆ ‘ವೆಲ್ಲಿಂಗ್ಟನ್ ಫಾಲ್ಸ್’ ಎಂದೂ ಕರೆಯುತ್ತಾರೆ.

## ಭುವನಗಿರಿ ದೇವಾಲಯ

**ದೂರ ಎಷ್ಟು?**
ತಾಲೂಕು : ಸಿದ್ದಾಪುರ
ತಾಲೂಕಿನಿಂದ : ೭ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೩೩ ಕಿ.ಮೀ





ಭುವನಗಿರಿ ದೇವಾಲಯದ ಎದುರಿನ ಸಸ್ಯಶ್ಯಾಮಲೆ

ಇದು ಕರ್ನಾಟಕದ ನಾಡದೇವಿ ಎಂದು ಪ್ರಖ್ಯಾತಿಯನ್ನು ಪಡೆದಿದೆ.

ಸಿದ್ಧಾಪುರದಿಂದ ಕುಮಟಾಕ್ಕೆ ತೆರಳುವ ಮಾರ್ಗದಲ್ಲಿ ಸಾಗುವ ಮಾರ್ಗದಿಂದ ೧೦೦೦ ಅಡಿಗಳಿಗೂ ಎತ್ತರದ ಗುಡ್ಡವೊಂದರ ಮೇಲೆ ಈ ದೇವಾಲಯ ಇದೆ. ಕನ್ನಡ ನಾಡಿನ ಏಕೈಕ ಭುವನೇಶ್ವರಿ ದೇವಾಲಯವಿದು. ಕನ್ನಡ ತಾಯಿ ಸದಾ ಉನ್ನತ ಸ್ಥಾನದಲ್ಲಿ ನಿಂತಿರುತ್ತಾಳೆ ಎಂಬುದು ಗಣನೀಯ ಅಂಶವಾಗಿದೆ. ದೇವಾಲಯದ ಪ್ರಾಂಗಣದಲ್ಲಿ ನಿಂತು ನೋಡಿದಾಗ ನೂರಾರು ಎಕರೆ ಗದ್ದೆ, ತೋಟ, ದಟ್ಟ ಹಸಿರು ಕಾನನಗಳು ಕಾಣಸಿಗುತ್ತವೆ.

ಇವುಗಳೊಂದಿಗೆ ಈ ತಾಲೂಕಿನಲ್ಲಿ ನೋಡಬಹುದಾದ ಇನ್ನಿತರ ಸ್ಥಳಗಳೆಂದರೆ ಕುಮಟಾ ಮಾರ್ಗದಲ್ಲಿರುವ ಬೇಡ್ಕಣಿಯ ಶನಿದೇವಾಲಯ, ಶಿರಸಿ ಮಾರ್ಗದಲ್ಲಿರುವ ಶಿಡ್ಲಗದ್ದೆ ಜಲಾಶಯ , ಸಿದ್ದಾಪುರ-ಜೋಗ್ ಮಾರ್ಗದಲ್ಲಿರುವ ಹಲಗೇರಿ ಗ್ರಾಮದ ಹೊಸೂರ್ ಡ್ಯಾಮ್ ಇತ್ಯಾದಿಗಳು.

## ಯಲ್ಲಾಪುರ

**ದೂರ ಎಷ್ಟು?**
ತಾಲೂಕು : ಯಲ್ಲಾಪುರ
ತಾಲೂಕಿನಿಂದ : ೩೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೨೮ ಕಿ.ಮೀ





ಸಾತೋಡಿ ಫಾಲ್ಸ್ ೨೮ ಕಿ.ಮೀ.

ಯಲ್ಲಾಪುರ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಣ್ಣ ಪಟ್ಟಣ. ತಾಲೂಕು ಕೇಂದ್ರವಾಗಿರುವ ಯಲ್ಲಾಪುರ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿರುವ ಪ್ರದೇಶ. ಯಲ್ಲಾಪುರವು ಪ್ರವಾಸಿ ತಾಣವಾಗಿದ್ದು ಸುಂದರವಾದ ಜಲಪಾತಗಳು ಹಾಗೂ ಬೆಟ್ಟ ಕಾಡುಗಳಿಂದ ಪ್ರವಾಸಿಗರ ಮನ ತಣಿಸುತ್ತದೆ.

ಸಾತೋಡಿ ಫಾಲ್ಸ್ ಇದು ಅಮೇರಿಕಾದ ಪ್ರಸಿದ್ಧ ನಯಾಗಾರ ಜಲಪಾತದಂತಿದ್ದು ಹಲವಾರು ಝರಿಗಳಿಂದ ನೀರು ಕ್ರೋಢೀಕೃತವಾಗಿ ೧೫ ಮೀ ಎತ್ತರದಿಂದ ಧುಮುಕುವದು ನೋಡುವವರನ್ನು ಮಂತ್ರ ಮುಗ್ಧವಾಗಿಸುತ್ತದೆ, ಮುಂದೆ ಇದು ಕಾಳಿನದಿಯ ಹಿನ್ನೀರನ್ನು ಸೇರಿಕೊಳ್ಳುತ್ತದೆ. ಇದು ವರ್ಷವಿಡೀ ನೀರಿರುವ ಜಲಪಾತವಾಗಿದೆ. ಸೆಪ್ಟೆಂಬರದಿಂದ ಮಳೆಗಾಲ ಆರಂಭವಾಗುವವರೆಗೆ ಯಾವಾಗ ಬೇಕಾದರೂ

ಇಲ್ಲಿಗೆ ಪ್ರವಾಸ ಕೈಗೊಳ್ಳಬಹುದು. ಇಲ್ಲಿಗೆ ಸಮೀಪದ ಜೋಯಿಡಾ ಮತ್ತು ಯಲ್ಲಾಪುರದ ಮಧ್ಯೆಯಿರುವ ಕಾಳಿ ಹಿನ್ನೀರಿನ ಪ್ರದೇಶವು ತೆಪ್ಪ ವಿಹಾರಕ್ಕೆ ಹೆಸರುವಾಸಿಯಾಗಿದೆ.

**ಜೇನುಕಲ್ಲುಗುಡ್ಡ**

**ದೂರ ಎಷ್ಟು ?**
ತಾಲೂಕು : ಯಲ್ಲಾಪುರ
ತಾಲೂಕಿನಿಂದ : ೨೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೨೫ ಕಿ.ಮೀ



ಯಲ್ಲಾಪುರದಿಂದ ೨೦ ಕಿ.ಮಿ ದೂರದಲ್ಲಿ ಇರುವ ಜೇನುಕಲ್ಲು ಗುಡ್ಡ ಪ್ರಕೃತಿ ಸೊಬಗಿಗೆ ಹೆಸರುವಾಸಿ.

ಅತ್ಯಂತ ಎತ್ತರ ಪ್ರದೇಶದಲ್ಲಿರುವ ಸ್ಥಳವು ಸೂರ್ಯಾಸ್ತ ವೀಕ್ಷಣೆಯನ್ನು ಆಹ್ಲಾದಕರವಾಗಿಸುತ್ತದೆ. ಇವಲ್ಲದೆ ಯಲ್ಲಾಪುರದಲ್ಲಿ ಅನೇಕ ನೈಸರ್ಗಿಕ ಸೌಂದರ್ಯದ ಸೊಬಗಿದೆ. ತಾಲೂಕಿನಿಂದ ೩೦ ಕಿ.ಮೀ.ದೂರದಲ್ಲಿರುವ ಕಳಚೆಯು ಸುಂದರ ಬೆಟ್ಟ ಗುಡ್ಡಗಳಿಂದ ಆವೃತವಾಗಿದೆ. ಕಳಚೆಯಲ್ಲಿರುವ ೮೦ ಅಡಿಯ ಕಲ್ಲುಬಂಡೆ ಮನ ಸೆಳೆಯುತ್ತದೆ. ಊರ ಜನರು ಇದನ್ನು ದೇವಿ ಕಲ್ಲು ಎಂದು ಕರೆಯುವರು.

**ಮಾಗೋಡ ಜಲಪಾತ :**

**ದೂರ ಎಷ್ಟು ?**
ತಾಲೂಕು : ಯಲ್ಲಾಪುರ
ತಾಲೂಕಿನಿಂದ : ೧೯ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೧೯ ಕಿ.ಮೀ



ಮಾಗೋಡು ಫಾಲ್ಸ್, ೧೯ ಕಿ.ಮೀ.

ಯಲ್ಲಾಪುರ ಕೇಂದ್ರದಿಂದ ೧೯ ಕಿ.ಮೀ ದೂರದಲ್ಲಿದೆ. ಬೇಡ್ತಿ ನದಿಯು ೬೫ ಅಡಿ ಎತ್ತರದಿಂದ ಮೂರು ಹಂತಗಳಲ್ಲಿ ಧುಮುಕುತ್ತದೆ.

**ಬ್ರಹ್ಮಕುಮಾರಿ ತಪೋವನ**

**ದೂರ ಎಷ್ಟು?**
ತಾಲೂಕು : ಯಲ್ಲಾಪುರ
ತಾಲೂಕಿನಿಂದ : ೩ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೮ ಕಿ.ಮೀ




ಬ್ರಹ್ಮ ಕುಮಾರಿ ತಪೋವನವು ಮೌಂಟ್ ಅಬುವನ್ನು ಹೊರತುಪಡಿಸಿದರೆ, ಎರಡನೆಯ ದೊಡ್ಡ ಆಧ್ಯಾತ್ಮಿಕ ಕೇಂದ್ರವಾಗಿದೆ. ಇದು ಸುಂದರವಾದ ಹೂದೋಟಗಳಿಂದ ಕಂಗೊಳಿಸುತ್ತದೆ.

ಇಲ್ಲಿನ ಪ್ರಶಾಂತ ವಾತಾವರಣವು ಮನ:ಶಾಂತಿ ಹೊಂದಲು ಪೂರಕವಾಗಿದೆ. ಧ್ಯಾನ, ಯೋಗ ಆಧ್ಯಾತ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಗಮನ ಸೆಳೆಯುತ್ತಿದೆ.

**ಕವಡಿಕೆರೆ :**



ಸುಮಾರು ೬೦ ಎಕರೆ ವಿಸ್ತೀರ್ಣವನ್ನು ಹೊಂದಿದ ಈ ಕೆರೆ ಅನೇಕ ಪ್ರವಾಸಿಗರನ್ನು ಆಕರ್ಷಿಸಿದೆ. ಸದಾ ಕಾಲವು ಮನವನರಳಿಸುವ ತಾವರೆಯ ಆಗರ ಈ ತಾಣ. ಈ ಪ್ರದೇಶವನ್ನೊಂದು ಪಕ್ಷಿಧಾಮವನ್ನಾಗಿ ಅಭಿವೃದ್ಧಿಪಡಿಸುವ ಪ್ರಯತ್ನ ನಡೆದಿದೆ.

## ಮುಂಡಗೋಡು

**ದೂರ ಎಷ್ಟು?**
ತಾಲೂಕು : ಮುಂಡಗೋಡು
ತಾಲೂಕಿನಿಂದ : ೧೩ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೮೨ ಕಿ.ಮೀ







ಅತ್ತಿವೇರಿ ಪಕ್ಷಿಧಾಮವು ವಲಸೆ ಹಕ್ಕಿಗಳಿಗೆ ಆಶ್ರಯ ನೀಡುವ ಜಿಲ್ಲೆಯ ಮಹತ್ವದ ಪಕ್ಷಿಧಾಮವಾಗಿದೆ. ಪಕ್ಷಿಸಂಕುಲಕ್ಕೆ ಅಗತ್ಯವಿರುವ ವಾತಾವರಣವು ಇಲ್ಲಿರುವುದರಿಂದ ವಿದೇಶದ ಪಕ್ಷಿಗಳು ಸಹ ವಲಸೆಗಾಗಿ,ವಿಹಾರಕ್ಕಾಗಿ ಇಲ್ಲಿ ಬರುತ್ತಿವೆ. ಪಕ್ಷಿಗಳ ಬಗೆ ಬಗೆ ಬಣ್ಣ, ವಿಧ ವಿಧ ವಿನ್ಯಾಸಗಳನ್ನು ಇಲ್ಲಿ ನೋಡಿಯೇ ಆನಂದಿಸಬೇಕು. ವಿದೇಶದ ಪಕ್ಷಿಗಳಿಗೆ ಇಲ್ಲಿ ಆಕರ್ಷಣೆ ಇರುವಾಗ ಈ ದೇಶೀಯರು ಆಕರ್ಷಿತರಾಗದಿದ್ದರೆ ಆಶ್ಚರ್ಯವೇ ಸರಿ.

## ಕರ್ನಲ್ ಹಿಲ್

**ದೂರ ಎಷ್ಟು?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೯೦ ಕಿ.ಮೀ





ಯಕ್ಷಗಾನ ಕಲೆ, ಉತ್ತರ ಕನ್ನಡ

ಹೊನ್ನಾವರದಿಂದ ಕುಮಟಾಕ್ಕೆ ಹೋಗುವ ಹೆದ್ದಾರಿಯಲ್ಲಿ ಬಲಭಾಗದ ಗುಡ್ಡದತ್ತ ಕಣ್ಣು ಹಾಯಿಸಿದರೆ, ಮುಗಿಲೆತ್ತರಕ್ಕೆ ನಿಂತ ಕಲ್ಲು ಕಂಬವೊಂದು ಗಮನ ಸೆಳೆಯುತ್ತದೆ. ಇದೇ ಕರ್ನಲ್ ಹಿಲ್.

ಬ್ರಿಟೀಷ ಸೈನ್ಯಾಧಿಕಾರಿ ಕ್ಲೆಮೆಂಟ್ ಡಬ್ರೆಸ್ ಹಿಲ್ ಎಂಬಾತನ ಸ್ಮರಣಾರ್ಥ ನಿಲ್ಲಿಸಿದ ಈ ವೀರ ಕಂಬವು, ಆತನ ಹೋರಾಟವನ್ನಷ್ಟೆ ಅಲ್ಲ, ಅವನ ಮುದ್ದಿನ ನಾಯಿಯೊಂದರ ಸಾವಿನ ಕಥೆಯನ್ನು ಹೇಳುತ್ತದೆ. ಸಮುದ್ರ ತೀರದಿಂದ ಎತ್ತರದಲ್ಲಿರುವ ಇದು ಸೂರ್ಯಾಸ್ತದ ಸುಂದರ ದೃಶ್ಯವನ್ನು ಸವಿಯುವ ತಾಣವಾಗಿದೆ.

ಇವೇ ಅಲ್ಲದೇ ತಾಲೂಕಿನ ಸಮೀಪದ ಬಸವರಾಜ ದುರ್ಗ, ಗುಂಡಬಾಳದ ಪ್ರಸಿದ್ಧ ಮುಖ್ಯ ಪ್ರಾಣ ಶ್ರೀ ಲಕ್ಷ್ಮೀ ವೆಂಕಟೇಶ ದೇವಾಲಯ ಮೊದಲಾದವು ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿವೆ. ಹೊನ್ನಾವರದಿಂದ ೧೬ ಕಿ.ಮೀ. ದೂರವಿರುವ ವಲ್ಕಿಯಲ್ಲಿ ಐತಿಹಾಸಿಕ ಪ್ರಸಿದ್ಧವಾದ ದರ್ಗಾವೂ ಇದೆ.

## ಸೇಂಟ್ ಫ್ರಾನ್ಸಿಸ್ ಝೇವಿಯರ್ ಚರ್ಚ್, ಚಂದಾವರ :

**ದೂರ ಎಷ್ಟು ?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೧೭ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦೨ಕಿ.ಮೀ



೧೬೭೮ರಲ್ಲಿ ಕಟ್ಟಿದ ಸೇಂಟ್‌ಫ್ರಾನ್ಸಿಸ್ ಝೇವಿಯರ್ ಚರ್ಚ್ ಚಂದಾವರದಲ್ಲಿದೆ. ಸೀಮೆಯ ಕ್ರೈಸ್ತರೆಲ್ಲ ಹರಕೆ ಹೊತ್ತುಕೊಳ್ಳುವ ಪ್ರಸಿದ್ಧ ಚರ್ಚ್ ಇದು. ಪ್ರತಿ ವರ್ಷ ಡಿಸೆಂಬರ ೩ ರಂದು ಇಲ್ಲಿ ವಾರ್ಷಿಕ ಹಬ್ಬ ನಡೆಯುತ್ತದೆ.

ಇಕ್ಕೇರಿ ನಾಯಕರ ಕಾಲದಲ್ಲಿ ಘಟ್ಟದ ಕೆಳಗಿನ ಐದು ಸೀಮೆಗಳಲ್ಲಿ ಚಂದಾವರವೂ ಒಂದು ಸೀಮೆಯಾಗಿತ್ತು. ಹಳೆಯ ಕೋಟೆಯೊಂದು ಇಲ್ಲಿದೆ.

**ತೂಗು ಸೇತುವೆ - ಕರ್ಕಿ**

**ದೂರ ಎಷ್ಟು ?**
ತಾಲೂಕು : ಹೊನ್ನಾವರ
ತಾಲೂಕಿನಿಂದ : ೪ ಕಿ.ಮೀ
ಜಿಲ್ಲಾ ಕೇಂದ್ರದಿಂದ :೮೭ ಕಿ.ಮೀ



ಕರ್ಕಿಯಲ್ಲಿ ಆಕರ್ಷಕವಾದ ತೂಗುಸೇತುವೆಯೊಂದು ಇದೆ. ಪಾವಿನಕುರ್ವಾ ನಡುಗಡ್ಡೆ ಹಾಗೂ ಕರ್ಕಿಯ ನಡುವೆ ಇದು ಸಂಪರ್ಕವನ್ನು ಕಲ್ಪಿಸುತ್ತದೆ.

**ಭಟ್ಕಳ**

**ದೂರ ಎಷ್ಟು?**
ತಾಲೂಕು : ಭಟ್ಕಳ
ತಾಲೂಕಿನಿಂದ : ೧೮ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೧೪ ಕಿ.ಮೀ


ಮುರ್ಡೇಶ್ವರ


ಭಟ್ಕಳ ಬಂದರಿನಲ್ಲಿ ಮೀನು ಮಾರುತ್ತಿರುವ ದೃಶ್ಯ.

ಹೊನ್ನಾವರದಿಂದ ಭಟ್ಕಳ ಕಡೆಗೆ ಸಾಗುವಾಗ ಮಾರ್ಗ ಮಧ್ಯೆ ಹೆಬ್ಬಾಗಿಲೊಂದು ಪ್ರವಾಸಿಗರನ್ನು ಮುರ್ಡೇಶ್ವರಕ್ಕೆ ಸ್ವಾಗತಿಸುತ್ತದೆ. ಇಲ್ಲಿ ಏಷ್ಯಾದಲ್ಲಿಯೇ ಎರಡನೇಯದು ಎನ್ನಲಾಗುವ ಅತೀ ಎತ್ತರದ ಶಿವನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಇದು ಪ್ರವಾಸಿಗರನ್ನು ಆಕರ್ಷಿಸುತ್ತದೆ.

ನಮ್ಮೊಳಗಿನ ಏಕಾಂತದ ದಿವ್ಯಾನುಭೂತಿಯನ್ನು ಜಾಗೃತಗೊಳಿಸಿ ಮನೋಲ್ಲಾಸಹೊಂದಲು ಮುರ್ಡೇಶ್ವರ ಉತ್ತಮ ತಾಣ. ಸಮುದ್ರದ ಅಲೆಗಳಿಗೆ ಮೈ ಚಾಚಿ ನಿಂತಿರುವ ಗುಡ್ಡದ ಮೇಲೆ ಬೃಹತ್ತಾದ ಶಿವನ ಮೂರ್ತಿ ಇದೆ. ವಿರಾಮವೇ ಇಲ್ಲದಂತೆ ಬಂಡೆಗಳಿಗೆ ಬಡಿದು ಮರಳುವ ಅಲೆಗಳ ಸುಂದರ ತೀರ , ಪುರಾಣದ ಕಥೆ ಹೇಳುವ ಸುಂದರ ಮೂರ್ತಿಗಳು ಇಲ್ಲಿನ ಆಕರ್ಷಣೆಯಾಗಿವೆ. ಪೌರಾಣಿಕ ಹಿನ್ನೆಲೆಯಿರುವ ಶಿವ ದೇವಾಲಯ ಇಲ್ಲಿನ ವಿಶೇಷ.

**ಹಾಡುವಳ್ಳಿ - ಜೈನ ತೀರ್ಥಂಕರರ ಮೂರ್ತಿಗಳು**

**ದೂರ ಎಷ್ಟು?**
ತಾಲೂಕು : ಭಟ್ಕಳ
ತಾಲೂಕಿನಿಂದ : ೨೧ ಕಿ.ಮೀ
ಜಿಲ್ಲಾ ಕೇಂದ್ರದಿಂದ: ೧೩೬ ಕಿ.ಮೀ





ಜುಮ್ಮಾ ಮಸೀದಿ ಭಟ್ಕಳ

ಹಾಡುವಳ್ಳಿ ಸಾಳುವ ರಾಜವಂಶದವರ ರಾಜಧಾನಿಯಾಗಿತ್ತು. ಇಲ್ಲಿ ಸುಮಾರು ಅರ್ಧ ಮೀಟರ್ ಎತ್ತರದ ೨೪ ಜೈನ ತೀರ್ಥಂಕರರ ಸಾಲು ಮೂರ್ತಿಗಳಿವೆ. ಯಕ್ಷಿ, ಪದ್ಮಾವತಿ ,ಜೈನ ಸರಸ್ವತಿ ಹಾಗೂ ಕುದುರೆ ಮೇಲೆ ಕುಳಿತಿರುವ ಬ್ರಹ್ಮನ ಕಂಚಿನ ವಿಗ್ರಹ ಈ ಬಸದಿಯಲ್ಲಿವೆ.ಇಲ್ಲಿ ಚಂದ್ರಗಿರಿ ಹಾಗೂ ಇಂದ್ರಗಿರಿ ಎಂಬ ಎರಡು ಗುಡ್ಡಗಳಿದ್ದು, ಚಂದ್ರಗಿರಿಯ ¥ಡಿಯಲ್ಲಿ ವಿಜಯನಗರ ಕಾಲದ ಚಂದ್ರನಾಥ ಬಸದಿ ಇದೆ.

ಇವೇ ಅಲ್ಲದೆ ಭಟ್ಕಳದಲ್ಲಿರುವ ಜೈನ ಬಸದಿಗಳಲ್ಲಿ ನಗರದ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿ ಗಮನಾರ್ಹವಾದುದು. ಇದು ರಾಣಿ ಚೆನ್ನಭೈರಾದೇವಿಯ ಕಾಲದಲ್ಲಿ ನಿರ್ಮಾಣವಾಯಿತು ಎನ್ನಲಾಗುತ್ತದೆ. ಕಾಯ್ಕಿಣಿಯಲ್ಲಿರುವ ಪಾರ್ಶ್ವನಾಥ ಬಸದಿ, ಸೋಡಿಗದ್ದೆ ಮಹಾಸತಿ ದೇವಾಲಯ, ಕಡವಿನಕಟ್ಟಾ ದೇವಾಲಯ, ಮಾರುತಿ ಗುಡಿ, ಅಮರಲಿಂಗ ದೇವಾಲಯ ಇವೆಲ್ಲವೂ ಆಸ್ತಿಕರ ಶ್ರದ್ಧಾ ಕೇಂದ್ರಗಳಾಗಿವೆ.

ಅಂತೆಯೇ ಭಟ್ಕಳ ಪಟ್ಟಣದಲ್ಲಿರುವ ಜುಮ್ಮಾ ಮಸೀದಿ ಮುಸ್ಲೀಮರ ಮುಖ್ಯ ಮಸೀದಿಗಳಲ್ಲಿ ಒಂದಾಗಿದೆ. ತಾಲೂಕಿನ ಚಿತ್ರಾಪುರದಲ್ಲಿರುವ ಮಠ ಹಾಗೂ ವೆಂಕಟಾಪುರ ನದಿ ತೀರವೂ ಕೂಡ ಪ್ರವಾಸಿಗರ ಮನ ತಣಿಸುವ ಸುಂದರ ತಾಣಗಳಾಗಿವೆ.

**ಶಿರಸಿ**

**ಬನವಾಸಿ**

**ದೂರ ಎಷ್ಟು?**

ತಾಲೂಕು: ಶಿರಸಿ
ತಾಲೂಕಿನಿಂದ : ೨೨ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೪೧ ಕಿ.ಮೀ



ವರದಾ ನದಿ ತಟದ ಬನವಾಸಿ ಕನ್ನಡದ ಮೊದಲ ರಾಜಧಾನಿ. ಇದು ಕದಂಬ ರಾಜ ಮಯೂರವರ್ಮ ಆಳಿದ ನೆಲ. ಮಧು (ಜೇನುತುಪ್ಪ) ಬಣ್ಣದ ಶಿವಲಿಂಗ ಇಲ್ಲಿರುವುದರಿಂದ ಮಧುಕೇಶ್ವರ ದೇವಸ್ಥಾನ ಎಂಬ ಹೆಸರು ಬಂದಿದೆ. ಈ ದೇವಸ್ಥಾನದಲ್ಲಿನ ನಂದಿ ವಿಗ್ರಹ ಬಹು ಪ್ರಸಿದ್ಧ. ಪಕ್ಕದಲ್ಲಿ ಪಾರ್ವತಿ ಮಂದಿರ ಕೂಡ ಇದೆ. ಕರಿಕಲ್ಲಿನಿಂದ ನಯವಾಗಿ ಕೆತ್ತಲಾದ ಕಲ್ಲು ಮಂಚ ಶಿಲ್ಪ ಕೌಶಲ್ಯಕ್ಕೆ ಸಾಕ್ಷಿ. ಸೋದೆ ಅರಸ ರಘುನಾಥ ನಾಯಕನು ದೇವರ ವಸಂತೋತ್ಸವದ ನೆನಪಿಗೆ ಅರ್ಪಿಸಿದನೆಂಬುದು ಇತಿಹಾಸ. ಸೋದೆಯ ಇನ್ನೋರ್ವ ರಾಜ ರಾಮಚಂದ್ರ ನಾಯಕನು ದಕ್ಷಿಣ ಭಾರತದಲ್ಲೇ ಅತೀ ಎತ್ತರದ ಮಹಾ ರಥ ಮಾಡಿಸಿಕೊಟ್ಟಿದ್ದು ಇಂದಿಗೂ ಇಲ್ಲಿ ಕಾಣಬಹುದು. ಬನವಾಸಿ ದೇಗುಲದ ಪಕ್ಕವೇ ಕಲಾವಿದ ಶ್ರೀಪಾದ ಪುರೋಹಿತರ 'ಆರ್ಟ ಗ್ಯಾಲರಿ' ಇದೆ. ಪ್ರತಿ ವರ್ಷವೂ ರಾಜ್ಯ ಸರ್ಕಾರ ಕದಂಬರ ರಾಜ್ಯದ ನೆನಪಿಗಾಗಿ ಕದಂಬೋತ್ಸವವನ್ನು ಇಲ್ಲಿ ಆಚರಿಸುತ್ತಿದೆ. ಅಂದು ನಾಡಿನ ಪ್ರಸಿದ್ಧ ಲೇಖಕರಿಗೆ ಅಲ್ಲಿಯೇ ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.

"ಮರಿ ದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" – ಪಂಪ

**ಸೋಂದಾ ಮಠ :**

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೨೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೩೪ ಕಿ.ಮೀ.



ಇದು ಒಂದು ಐತಿಹಾಸಿಕ ಸ್ಥಳ ಹಾಗೂ ಯಾತ್ರಾ ಸ್ಥಳವೂ ಹೌದು. ಸೋಂದಾ ಅಥವಾ ಸುಧಾಪುರ ಸೋದೆಯ ಅರಸರ ರಾಜಧಾನಿಯಾಗಿ ಪ್ರಸಿದ್ಧಿಯನ್ನು ಪಡೆದಿದೆ.

ಕ್ರಿ.ಶ ೧೫೫೫ ರಿಂದ ೧೭೬೩ ರವರೆಗೆ ಸೋಂದಾ ಅರಸರ ಆಳ್ವಿಕೆ ನಡೆದು ತನ್ನ ವೈಭವವನ್ನು ದೇಶ-ವಿದೇಶಗಳಲ್ಲಿ ಮೆರೆದಂತಹ ಸ್ಥಳ. ಇಲ್ಲಿಗೆ ಶಿರಸಿ-ಯಲ್ಲಾಪುರ ಮಾರ್ಗ ಹಾಗೂ ಶಿರಸಿ-ಹುಲೇಕಲ್ ಮಾರ್ಗದಲ್ಲಿ ಕೂಡ ಹೋಗಬಹುದಾಗಿದೆ. ಇಲ್ಲಿಯ ಕೆರೆಗಳ ಸಂಪರ್ಕ ಜಾಲ ಅಧ್ಯಯನಕ್ಕೆ ಕೂಡ ಬಹಳ ಅನುಕೂಲವನ್ನು ಒದಗಿಸುತ್ತದೆ. ಹುಲೇಕಲ್ ಲಕ್ಷ್ಮೀನಾರಾಯಣ ದೇವಾಲಯ, ಸೋದೆ ಕೋಟೆ, ಮುತ್ತಿನ ಕೆರೆ, ಹಳೆಯೂರು ಶಂಕರ ನಾರಾಯಣ ದೇವಾಲಯ ಸೇರಿದಂತೆ ಹಲವು ದೇವಾಲಯಗಳು ಬಹಳ ಕಲಾತ್ಮಕವಾಗಿದೆ. ಇಲ್ಲಿರುವ ಜೈನ ಮಠಗಳು ಸೋದೆ ಅರಸರ ಐತಿಹಾಸಿಕ ಪಳೆಯುಳಿಕೆಗಳು. ಸೋಂದಾ ಸ್ವಾದಿ ಜೈನ ಮಠ, ಸೋದೆ ವಾದಿರಾಜ ಮಠ, ಸೋಂದಾ ಸ್ವರ್ಣವಲ್ಲಿ ಮಠ, ಗದ್ದಿಗೆಯ ಮಠ ಹಾಗೂ ಮಹಾಂತೀರ ಮಠಗಳೆಂಬ ಪಂಚ ಮಠಗಳು ಈ ಕ್ಷೇತ್ರದಲ್ಲಿ ದರ್ಶನೀಯವಾಗಿದೆ.

**ಬೆಣ್ಣೆಹೊಳೆ ಜಲಪಾತ**

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೩೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೮೯ ಕಿ.ಮೀ




ಶಿರಸಿ ಕುಮಟಾ ಮುಖ್ಯ ರಸ್ತೆಯಿಂದ ೬ ಕಿ.ಮೀ ದೂರದಲ್ಲಿ ಬೆಣ್ಣೆಹೊಳೆ ಜಲಪಾತ ಇದೆ. ಜಲಗದ್ದೆಯಿಂದ ೧ ಕಿ.ಮೀ ಒಳಗಡೆ ಈ ಬೆಣ್ಣೆಹೊಳೆಯ ಮೂಲವಿದ್ದು, ಕುಮಟಾ ತಾಲೂಕಿನ ಕಳವೆ ಎಂಬಲ್ಲಿ ಅಘನಾಶಿನಿ ನದಿಗೆ ಕೂಡುತ್ತದೆ. ಈ ಜಲಪಾತವು ಸುಮಾರು ೨೦೦ ಅಡಿ ಎತ್ತರದಿಂದ ಧುಮುಕುತ್ತಿದ್ದು ನೋಡಲು ಮನೋಹರವಾಗಿದೆ. ಹಸಿರು ಗಿಡಗಳ ಮಧ್ಯೆ ಸುಮಾರು ೬ ಕಿ,.ಮೀ ಕಚ್ಚಾ ರಸ್ತೆಯಲ್ಲಿ ಕ್ರಮಿಸಿ ಈ ಜಲಪಾತವನ್ನು ತಲುಪಬೇಕು. ಅಪಾರ ಸಸ್ಯ ಸಂಪತ್ತನ್ನು ಹೊಂದಿರುವ ಈ ಪ್ರದೇಶದಲ್ಲಿ ೧ ಕಿ.ಮೀ ಅಂತರದಲ್ಲಿ ಜನವಸತಿ ಪ್ರದೇಶವಿದೆ. ಸಾಮಾನ್ಯವಾಗಿ ಅಕ್ಟೋಬರ್‌ನಿಂದ ಜನವರಿ ತಿಂಗಳಲ್ಲಿ ಈ ಜಲಪಾತಕ್ಕೆ ಭೇಟಿ ನೀಡಿದರೆ ನಾವು ಜಲಪಾತದ ನಿಸರ್ಗ ಸೌಂದರ್ಯವನ್ನು ಸವಿಯಬಹುದು.

**ಸಹಸ್ರಲಿಂಗ :**

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೧೭ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೩೫ ಕಿ.ಮೀ.



ಶಿರಸಿಯಲ್ಲಿ ಶಾಲ್ಮಲಾ ನದಿ ಹರಿದಿದ್ದು, ಈ ನದಿಯ ನಡುವೆ ಸಹಸ್ರಲಿಂಗಗಳಿವೆ. ದಟ್ಟ ಕಾನನಗಳ ಮಧ್ಯೆ ನದಿಯ ನೀರಿನ ನಡುವೆ ಸಾವಿರಾರು ಲಿಂಗಗಳಿದ್ದುದರಿಂದ ಸಹಸ್ರಲಿಂಗ ಎಂದೇ ಹೆಸರಾಗಿದೆ.

ವಿವಿಧ ಗಾತ್ರದ, ವಿವಿಧ ವಿನ್ಯಾಸದ, ಲಿಂಗಗಳನ್ನು ಇಲ್ಲಿ ಕಾಣಬಹುದು. ಇದು ಪುಣ್ಯ ಕ್ಷೇತ್ರವೂ ಆಗಿದ್ದು ಶಿವರಾತ್ರಿಯ ದಿನ ಸಹಸ್ರಾರು ಭಕ್ತರು ಆಗಮಿಸಿ ಈ ಲಿಂಗಗಳ ದರ್ಶನವನ್ನು ಪಡೆದು ಪುನೀತರಾಗುತ್ತಿದ್ದಾರೆ. ಸೋದೆಯಿಂದ ಕೇವಲ ೫ ಕಿ.ಮೀ ದೂರದಲ್ಲಿ ಇದ್ದು ಪ್ರವಾಸೀ ಕ್ಷೇತ್ರವೂ ಆಗಿದೆ.

**ಶಿವಗಂಗೆ ಜಲಪಾತ**

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೨೪ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೪೩ ಕಿ.ಮೀ



ಈ ಜಲಪಾತವು ಗಣೇಶ ಫಾಲ್ ಹೊಳೆಯಿಂದ ಆಗಿದೆ. ಗುಡ್ಡದ ಕರಿಬಂಡೆಗಳ ಸಂಧಿಯಿಂದ ನೀರು ಜಲಪಾತವಾಗಿ ಧುಮುಕುತ್ತದೆ. ಶಿವನ ಜಟೆಯಿಂದ ಇಳಿಯುವ ಗಂಗೆಯಂತೆ ಕಾಣುವುದುರಿಂದ 'ಶಿವಗಂಗೆ ಜಲಪಾತ' ಎಂದು ಕರೆಯಲಾಗಿದೆ.

**ಮಾರಿಕಾಂಬಾ ದೇವಾಲಯ**

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೨೪ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೪೩ ಕಿ.ಮೀ



ಶಿರಸಿಯ ಶ್ರೀ ಮಾರಿಕಾಂಬಾ ದೇವಿಯ ಪ್ರತಿಷ್ಠಾಪನೆ ಪ್ರಥಮತಃ ಕ್ರಿ.ಶ ೬೮೯ ರಲ್ಲಿ ಜರುಗಿತು. ಆಗ ಶಿರಸಿಯು ಒಂದು ಕುಗ್ರಾಮವಾಗಿತ್ತು. ಇಲ್ಲಿಯ ಒಂದು ಕೆರೆಯಲ್ಲಿ ಸಿಕ್ಕಿತೆಂದು ಹೇಳಲಾಗುವ ಶ್ರೀದೇವಿಯ ಕಟ್ಟಿಗೆಯ ವಿಗ್ರಹವನ್ನು ಸ್ಥಾಪಿಸಲು ಭಕ್ತರು ಆಗ ವಿಜಯ ನಗರದ ಸಾಮ್ರಾಜ್ಯದ ಸಾಮಂತರಾಗಿದ್ದ ಸೋಂದಾ ರಾಜ್ಯದ ಮಹಾ ಪ್ರಭುಗಳಲ್ಲಿ ವಿನಂತಿಸಿದಾಗ ಅರಸರಾದ ಶ್ರೀ ಇಮ್ಮಡಿ ಸದಾಶಿವರಾಯರು ಶಿರಸಿಯಲ್ಲಿ ಗ್ರಾಮ ದೇವತೆಯಾಗಿ ಶ್ರೀ ದೇವತೆಯನ್ನು ಪ್ರತಿಷ್ಠೆ ಮಾಡಲು ಅನುಮತಿ ನೀಡಿದರು. ನೂರಾರು ವರ್ಷಗಳವರೆಗೆ ಊರಿನ ಹಿರಿಯರೇ ಮುಂದಾಳುಗಳಾಗಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಶಿರಸಿಯಲ್ಲಿ ಪ್ರತಿ ೨ ವರ್ಷಕ್ಕೊಮ್ಮೆ ಕರ್ನಾಟಕದಲ್ಲಿಯೇ ಅತೀ ದೊಡ್ಡ ಜಾತ್ರೆಯಾದ ಶ್ರೀ ಮಾರಿಕಾಂಬಾ ಜಾತ್ರೆಯು ೯ ದಿನಗಳ ವರೆಗೆ ಜರುಗುತ್ತದೆ. ಲಕ್ಷಾಂತರ ಜನರು ಈ ಜಾತ್ರೆಯಲ್ಲಿ ದೇವಿಯ ದರ್ಶನವನ್ನು ಪಡೆಯುತ್ತಾರೆ. ಈ ದೇವಸ್ಥಾನದಲ್ಲಿ ನಿತ್ಯ ಸಾವಿರಾರು ಭಕ್ತರು ದೇವಿಯ ಅನ್ನ ದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ.

## ಶ್ರೀ ಕ್ಷೇತ್ರ ಮಂಜುಗುಣಿ

**ದೂರ ಎಷ್ಟು?**
ತಾಲೂಕು : ಶಿರಸಿ
ತಾಲೂಕಿನಿಂದ : ೨೬ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೯೩ ಕಿ.ಮೀ



ಶಿರಸಿಯಿಂದ ಕುಮಟಾ ಮಾರ್ಗದಲ್ಲಿರುವ ಶ್ರೀ ಕ್ಷೇತ್ರ ಮಂಜುಗುಣಿ ಉತ್ತರ ಕನ್ನಡ ಜಿಲ್ಲೆಯ ಒಂದು ಪುರಾತನ ಹಾಗೂ ಒಂದು ಪವಿತ್ರ ಯಾತ್ರಾ ಸ್ಥಳ.

ಸಹ್ಯಾದ್ರಿಯ ಮಡಿಲಲ್ಲಿಯ ರಮಣೀಯ ತಾಣ. ಉಡುಪಿಯ ಶ್ರೀ ವಾದಿರಾಜ ಸ್ವಾಮಿಗಳು ರಚಿಸಿದ ತೀರ್ಥಪ್ರಬಂಧದದಲ್ಲಿ ಶ್ರೀ ಕ್ಷೇತ್ರದ ವರ್ಣನೆ ಇದೆ.

ವಿಜಯನಗರ ಕಾಲಕ್ಕಿಂತಲೂ ಪೂರ್ವದ್ದಾಗಿರಬಹುದಾದ ಶೈಲಿಯುಳ್ಳ ಶ್ರೀ ವೆಂಕಟರಮಣ ದೇವಾಲಯವು ಅನೇಕ ಸುಂದರ ಕೆತ್ತನೆಗಳನ್ನೊಳಗೊಂಡಿದೆ. ಮುಖ ಮಂಟಪ, ನವರಂಗ, ಅರ್ಧಮಂಟಪ ಮತ್ತು ಗರ್ಭಗ್ರಹಗಳನ್ನು ಹೊಂದಿದೆ. ಅಧ್ಯಯನಕ್ಕೆ ವಿಷಯವಾದ ಶೇಷಶಯನ, ಬಲದಂತ ಮುರಿದ ಗಣಪತಿ ವಿಗ್ರಹಗಳು ಸಂಶೋಧಕರ ಆಸಕ್ತಿಯನ್ನು ಕೆರಳಿಸುವಂತಹದು. ನವರಂಗದ ಮೊಗಸಾಲೆಯ ಹೊರ

ಪ್ರಾಕಾರಾಗಳ ಮೇಲೆ ರಾಮಾಯಣದ ಕೆತ್ತನೆ, ಕಂಬಗಳ ಮೇಲಿನ ವಟಪತ್ರಶಾಹಿ ಕೃಷ್ಣ, ಗೋಪಾಲಕೃಷ್ಣ, ತ್ರಿ-ಭಂಗಿಕೃಷ್ಣ, ಅನ್ನ ಲಕ್ಷ್ಮೀ, ಧಾನ್ಯಲಕ್ಷ್ಮೀ ಅಲ್ಲದೇ ವಿವಿದ ಮಾಟದ ಮುಖ ಮಂಟಪಗಳ ಕೆತ್ತನೆಯು ಸೊಗಸಾಗಿ ಮೂಡಿರುತ್ತದೆ. ಧಾರ್ಮಿಕ ಹಾಗು ವೈಜ್ಞಾನಿಕ ಭದ್ರಬುನಾದಿಯ ಮೇಲೆ ಶ್ರೀ ವೆಂಕಟರಮಣ ದೇವಾಲಯನ್ನು ರಚಿಸಲಾಗಿದೆ. ಚೈತ್ರ ಶುದ್ದ ಚತುರ್ದಶಿ ಸ್ಥಿರವಾರ ಮಧ್ಯಾಹ್ನ ಶ್ರೀ ದೇವರ ಪ್ರತಿಷ್ಠೆಯಾಗಿದ್ದು, ಆ ದಿನ ಶ್ರೀ ವರ್ಧಂತಿ ಉತ್ಸವವು ನಡೆಯುತ್ತದೆ. ಮಾರನೇ ದಿನ ಮಹಾ ರಥೋತ್ಸವ ನಡೆಯುವುದು

**ಸಿದ್ದಾಪುರ**

**ದೂರ ಎಷ್ಟು?**
ತಾಲೂಕು : ಸಿದ್ದಾಪುರ
ತಾಲೂಕಿನಿಂದ : ೧೨ ಕಿ.ಮೀ
ಜಿಲ್ಲಾ ಕೇಂದ್ರದಿಂದ :೧೩೮ ಕಿ.ಮೀ



ವಿಜಯನಗರದ ಅರಸರ ಸಾಮಂತರಾದ ಬಿಳಗಿ ಅರಸರು ಕ್ರಿ.ಶ. ೧೭೬೩ರ ವರೆಗೂ ಸಿದ್ದಾಪುರವನ್ನು ಆಳಿದ್ದು ಇತಿಹಾಸದಲ್ಲಿ ಉಲ್ಲೇಖವಾಗಿದೆ. ಈ ರಾಜ ಮನೆತನದ ಮೂಲ ಪುರುಷ 'ಅಂಡಣ'ನೆಂದು ಹೇಳಲಾಗುತ್ತದೆ. ಇವರು ಮೂಲತಃ ಜೈನ ಧರ್ಮೀಯರು.

ಇವರು ಅಂದು ನಿರ್ಮಿಸಿದ ಜೈನ ಬಸದಿ ಹಾಗೂ ಅಗತ್ಯ ಬಿದ್ದಾಗ ವೈರಿಗಳಿಂದ ರಕ್ಷಣೆ ಪಡೆಯಲು ನಿರ್ಮಿಸಿಕೊಂಡ 'ಗೋಲ ಬಾವಿ' ನೋಡುವುದಕ್ಕೆ ಅದ್ಭುತವಾಗಿದೆ. ಆಗಾಗ್ಗೆ ಪುರಾತತ್ವ ಇಲಾಖೆಯಿಂದ ಜೀರ್ಣೋದ್ದಾರ ಕಾರ್ಯ ನಡೆಯುವುದರಿಂದ ಇನ್ನೂ ಅಂದಿನ ಹೊಳಪನ್ನೇ ಹೊಂದಿದೆ.

(5)

"ಕರ್ನಾಟಕದ ಕಾಶ್ಮೀರ" ಭಾರತದ ಸ್ವಿಟ್ಜರ್ಲೆಂಡ್" ಎಂದು ಮುಂತಾಗಿ ಪ್ರಸಿದ್ದವಾಗಿರುವ ಉತ್ತರಕನ್ನಡ ಜಿಲ್ಲೆಯು ನೈಸರ್ಗಿಕವಾಗಿ ಸೌಂದರ್ಯಾತಿಶಯದಿಂದ ಕೂಡಿದೆ. ಕಣ್ಮನ ತುಂಬುವ ಕಾರವಾರದ ಕಡಲು, ನೋಡುಗರ ಮೈ ಮರೆಸುವ ಸಹ್ಯಾದ್ರಿ ಶ್ರೇಣಿ, ಮನದಾನಂದಕರ ಮಾಗೋಡು ಜಲಪಾತ ಮೊದಲಾದವುಗಳು ಈ ಜಿಲ್ಲೆಯ ಸೊಬಗಿನ ಸೆರೆಮನೆಗಳು. ಆದರೂ ಆಂಗ್ಲ ಕಥೆಯೊಳಗಿನ ಸಿಂಡ್ರೆಲ್ಲಾಳಂತೆ ಅನೇಕ ವರ್ಷಗಳಿಂದ ಉಪೇಕ್ಷಿತವಾಗಿದ್ದ ಜಿಲ್ಲೆ ಇತ್ತೀಚೆಗಿನ ವರ್ಷಗಳಲ್ಲಿ ಪ್ರವಾಸೋದ್ಯಮದಿಂದ ಪ್ರಸಿದ್ಧಿಹೊಂದುತ್ತಿದೆ.

**ಪೌರಾಣಿಕ ಹಿನ್ನೆಲೆ :**
ಸ್ಕಂದ ಪುರಾಣದಲ್ಲಿ ಬರುವ "ಭಾರ್ಗವಸೃಷ್ಟಿ" ಕಥೆಯು ಈ ಜಿಲ್ಲೆಯ ಕರಾವಳಿ ಪ್ರದೇಶದ ಹುಟ್ಟನ್ನು ಹೇಳುತ್ತದೆ. ಕ್ಷತ್ರಿಯರನ್ನೆಲ್ಲ ಗೆದ್ದು ಬ್ರಾಹ್ಮಣರಿಗೆ ದಾನವಾಗಿ ನೀಡಿದ ಪರಶುರಾಮನು ತನ್ನ ವಾಸಕ್ಕಾಗಿ ಪರಶು (ಕೊಡಲಿ)ವನ್ನೆಸೆದು ಸಮುದ್ರವನ್ನು ಹಿಂದೆ ಸರಿಸಿ ಕರಾವಳಿಯನ್ನು ಪಡೆದನು ಎಂಬುದು ಕಥೆ.

**ಐತಿಹಾಸಿಕ ಹಿನ್ನೆಲೆ :**

ದಕ್ಷಿಣಭಾರತವು ಮೌರ್ಯಸಾಮ್ರಾಜ್ಯಕ್ಕೊಳಪಟ್ಟ ಸಮಯದಲ್ಲಿ ಈ ಜಿಲ್ಲೆಯೂ ಅದರಲ್ಲಿ ಸೇರ್ಪಡೆಯಾಗಿತ್ತು. ಶಾತವಾಹನರು ಹಾಗೂ ಪಲ್ಲವರು ಈ ಭೂಪ್ರದೇಶವನ್ನು ಆಗ ಆಳುತ್ತಿದ್ದರು. ಬನವಾಸಿಯಲ್ಲಿ ಕಂಡುಬಂದ ಶಾತವಾಹನರ ಕಾಲದ ಪುರಾತನ ಅವಶೇಷಗಳು ಈ ಅಂಶವನ್ನು ತಿಳಿಸಿದೆ. ಕ್ರಿ.ಶ.ಸುಮಾರು ೭೮ನೇ ಇಸ್ವಿಯಲ್ಲಿ ಭೂತಾಳಪಾಂಡ್ಯನು ಗೋಕರ್ಣಮಂಡಲಾಧೀಶ್ವರ ಎಂಬ ಬಿರುದು ಧರಿಸಿ ಈಜಿಲ್ಲೆಯ ಕೆಲವು ಭೂಪ್ರದೇಶವನ್ನು ಆಳಿದನು.ಪಾಂಡ್ಯರು ಕದಂಬ ಹಾಗೂ ಶಾತವಾಹನರ ಸಾಮಂತ ಅರಸರಾಗಿ ಕ್ರಿ.ಶ.೩೯೩ ರವರೆಗೆ ಆಳಿದವರಾಗಿದ್ದಾರೆ. ಕರ್ನಾಟಕದಲ್ಲಿಯಂತೆ ಈ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ ಆರಂಭವಾದುದು ಕ್ರಿ.ಶ.ಸುಮಾರು ೨೮೦ ರಿಂದ. ಹೀಗೆ ಬೇರೆಬೇರೆ ಅರಸರ ಆಳ್ವಿಕೆಯಿಂದ ಮುಂದುವರಿದು ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಈ ಜಿಲ್ಲೆಯ ಘಟ್ಟದ ಸೀಮೆಯನ್ನು ಸ್ವಾದಿ ಅರಸರು ಹಾಗೂ ಕರಾವಳಿ ಪ್ರದೇಶವನ್ನು ಬೀದನೂರಿನ ನಾಯಕರು ಆಳಿದರು ಎಂದು ದಾಖಲೆಗಳು ತಿಳಿಸುತ್ತವೆ. ಈ ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ವೀರನಾದ ಬೀದನೂರಿನ ಶಿವಪ್ಪ ನಾಯಕನು ಕ್ರಿ. ಶ. ೧೬೪೫ ರಿಂದ ಕ್ರಿ.ಶ.೧೬೬೦ ರ ವರೆಗೆ ಆಳಿದನು.

ಮುಂದೆ ಸ್ವಾದಿ ಹಾಗೂ ಬೀದನೂರು ಕ್ರಿ.ಶ.೧೭೬೨ ರಲ್ಲಿ ಹೈದರಾಲಿಯ ವಶವಾಯಿತು.ಹೈದರನ ಮಗ ಟಿಪ್ಪುಸುಲ್ತಾನನನ್ನು ಕ್ರಿ.ಶ.೧೭೯೯ ರಲ್ಲಿ ಆಂಗ್ಲರು ಸೋಲಿಸಿ ಮದ್ರಾಸ್ ಇಲಾಖಾ ಆಡಳಿತಕ್ಕೆ ಒಪ್ಪಿಸಿದರು. ಕ್ರಿ.ಶ.೧೮೬೨ ರಲ್ಲಿ ಬಾಂಬೆ ಸರಕಾರದ ಆಳ್ವಿಕೆಗೆ ಒಳಪಟ್ಟು ಸ್ವತಂತ್ರಭಾರತದ ಮೈಸೂರುರಾಜ್ಯದ ವ್ಯಾಪ್ತಿಗೆ ಕ್ರಿ.ಶ.೧೯೪೭ ರಲ್ಲಿ ಒಳಪಟ್ಟಿತು. ಬ್ರಿಟಿಷರಿಂದ ಆಗಿದ್ದ ಈ ಜಿಲ್ಲೆಯನ್ನು ರಾಜ್ಯಸರಕಾರವು ಕ್ರಿ.ಶ. ೧೯೭೭ ರಲ್ಲಿ ಉತ್ತರಕನ್ನಡ ಎಂದು ಹೆಸರಿಸಿತು. ಕ್ರಿ.ಶ.೧೮೦೦ ರವರೆಗೆ ಕುಂದಾಪುರವು ಈ ಜಿಲ್ಲೆಗೆ ಸೇರಿತ್ತು. ಈಗ ಅದು ಉಡುಪಿ ಜಿಲ್ಲೆಗೆ ಸೇರಿದೆ. ಹೀಗೆ ಈ ಜಿಲ್ಲೆಯು ಕಾಲಕಾಲಕ್ಕೆ ರಾಜಕೀಯ ನಕ್ಷೆಯಿಂದ ಬದಲಾಗುತ್ತ ಸಾಗಿದೆ. ಈಗ ಈ ಜಿಲ್ಲೆಯು ೧೦.೩೨೭ ಚ.ಕಿ.ಮೀ.ಕ್ಷೇತ್ರವ್ಯಾಪ್ತಿಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ. ಕರಾವಳಿ, ಮಲೆನಾಡು ಹಾಗೂ ಅರೆಮಲೆನಾಡು (ಬಯಲುಸೀಮೆ) ಪ್ರದೇಶಗಳನ್ನು ಒಳಗೊಂಡ ರಾಜ್ಯದ ಏಕೈಕ ಜಿಲ್ಲೆ ಇದು.

**ಜಿಲ್ಲೆಯ ತಾಲೂಕುಗಳು :**

ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಹಾಗೂ ಜೊಯಿಡಾ.

**ಜನಾಂಗ, ಕಲೆ, ಸಂಸ್ಕೃತಿ:**

ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಮ್, ಕ್ರೈಸ್ತ, ಜೈನ ಮೊದಲಾದ ಧರ್ಮೀಯರು ಇದ್ದಾರೆ. ಹಿಂದುಗಳಲ್ಲೇ ಹವ್ಯಕ, ಕೊಮಾರ, ಅಂಬಿಗ, ನಾಡವರು, ನಾಮಧಾರಿ, ಕುಂಬಾರ, ಹರಕಂತರು, ಕರೇಒಕ್ಕಲಿಗ, ಪಟಗಾರ,ಹಾಲಕ್ಕಿಒಕ್ಕಲಿಗ ಆಗೇರ, ಹಳ್ಳೇರ ಹೀಗೆ ಸುಮಾರು ಐವತ್ತಕ್ಕೂ ಹೆಚ್ಚು ಜಾತಿಗಳಿವೆ. ಹಾಗಾಗಿ ಇದೊಂದು ಭಾರತದ ಭಾಗವಾದರೂ ಪುಟ್ಟ ಭಾರತವೇ ಆಗಿದೆ. ಜಾತಿಗಳು ಇರುವಂತೆ ಅವುಗಳದ್ದೇ ಆದ ವಿಭಿನ್ನ ಕಲೆ ಹಾಗೂ ಸಂಸ್ಕೃತಿಗಳೂ ಇವೆ ಎನ್ನುವುದು ಗಮನಾರ್ಹ. ಯಕ್ಷಗಾನವು ಇಲ್ಲಿನ ಪ್ರಸಿದ್ದ ಜನಪರ ಜನಪದ ಕಲೆಯಾಗಿದೆ. ಕೋಲಾಟ, ಸುಗ್ಗಿಕುಣಿತ ಗುಮಟೆಪಾಂಗ್, ಜೋಗೀಪದ, ಸೋಬಾನೆ ಹಾಡುಗಳು ಮೊದಲಾದವುಗಳು ಈ ಜಿಲ್ಲೆಯ ಜೀವನಾಡಿಯಾಗಿವೆ.

**ಬುಡಕಟ್ಟು ಜನಾಂಗಗಳು :**

ಸಿದ್ದಿ, ಕುಣಬಿ, ಗೊಂಡ, ಗೌಳಿ, ಹಾಗೂ ಹಾಲಕ್ಕಿಗರು

**ಜನಸಂಖ್ಯೆ :**

೨೦೦೧ ರ ಜನಗಣತಿಯಂತೆ ಜಿಲ್ಲೆಯ ಒಟ್ಟೂ ಜನಸಂಖ್ಯೆ ೧೩೫೩೬೪೪. ಇದರಲ್ಲಿ ಪುರುಷರು ೬೮೬೮೭೬ ಹಾಗೂ ಮಹಿಳೆಯರು ೬೬೬೭೬೮

**ಮಳೆ :**

ಸರಾಸರಿ ೨೮೩೫ ಮಿ.ಮೀ. ಗರಿಷ್ಟ ಮಳೆ ೪೦೧೫ ಮಿ.ಮೀ.( ಭಟ್ಕಳ ತಾಲೂಕು) ಹಾಗೂ ಕನಿಷ್ಟ ಮಳೆ ೧೨೯೬ ( ಮುಂಡಗೋಡು ತಾಲೂಕು)

**ಹವಾಮಾನ:**

ಬೇಸಿಗೆಯಲ್ಲಿ ಗರಿಷ್ಟ ಉಷ್ಣಾಂಶ ೩೩ ಡಿಗ್ರಿ. ಹಾಗೂ ಚಳಿಗಾಲದಲ್ಲಿ ಕನಿಷ್ಟ ಉಷ್ಣಾಂಶ ೨೦ ಡಿಗ್ರಿ.

**ಜಿಲ್ಲೆಯಲ್ಲಿ ಹರಿಯುವ ಮುಖ್ಯ ನದಿಗಳು :**

* ಕಾರವಾರ ಹಾಗೂ ಜೋಯಿಡಾ - ಕಾಳಿ ನದಿ

* ಅಂಕೋಲಾ, ಯಲ್ಲಾಪುರ - ಗಂಗಾವಳಿ ನದಿ (ಬೇಡ್ತಿ)

* ಕುಮಟಾ, ಸಿದ್ದಾಪುರ - ಅಘನಾಶಿನಿ ನದಿ

* ಹೊನ್ನಾವರ - ಶರಾವತಿ ನದಿ

* ಭಟ್ಕಳ - ವೆಂಕಟಾಪುರ ನದಿ

* ಶಿರಸಿ - ವರದಾ ನದಿ

**ಕಾರವಾರ**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೦ ಕಿ.ಮೀ


ಮಿನಿ ವಿಧಾನಸೌಧ


ಕಾರವಾರದ ಕಡಲತೀರ

ಕುಲುಕುಲು ಎಂಬ ಅನುರಣಿತ ಸ್ವರದಲ್ಲಿ ಭೋರ್ಗರೆಯುವ ಬೆಳ್ನೊರೆಯ ತೆರೆಗಳು ಮುತ್ತಿಕ್ಕುವ ಕಾರವಾರದ ಕಡಲತೀರಕ್ಕೆ 'ಕರ್ನಾಟಕದ ಕಾಶ್ಮೀರ' ಎಂಬ ಹೆಗ್ಗಳಿಕೆ ಇದೆ. ವಿಶ್ವಕವಿ ರವೀಂದ್ರನಾಥ ಠಾಗೋರರು ಇಲ್ಲಿನ ಸೌಂದರ್ಯವನ್ನು ಕುರಿತು "ಕಾರವಾರದ ಚೆಲುವು ಸೌಂದರ್ಯದ ಕುರುಹು" ಎಂದು ಉದ್ಗಾರ ತೆಗೆದಿದ್ದಾರೆ. ಅವರು ತಮ್ಮ "ಗೀತಾಂಜಲಿ" ಕೃತಿ ರಚಿಸಲು ಕಾರವಾರ ಸ್ಫೂರ್ತಿಯಾಯಿತೆಂದು ಒಂದು ಕಡೆ ಉಲ್ಲೇಖಿಸಿದ್ದಾರೆ.

ನಗರದ ಹೃದಯ ಭಾಗದಲ್ಲಿ ಮಿನಿವಿಧಾನಸೌಧ ಇದೆ. ಜಿಲ್ಲಾ ಕೇಂದ್ರ ಸ್ಥಳವಾದ ಇಲ್ಲಿ ರಾಜ್ಯಸರಕಾರದ ವಿವಿಧ ಕಚೇರಿಗಳು ಸಾಲುಗಳಲ್ಲಿ ಭವ್ಯವಾಗಿ ನಿಂತಿವೆ.

**ಕಾರವಾರ ಬಂದರು**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೨ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೨ ಕಿ.ಮೀ.



ಕಾರವಾರ ಬಂದರು ಒಂದು ಪ್ರಮುಖ ನೈಸರ್ಗಿಕ ಬಂದರು. ಇದು ಕಾರವಾರದ ಬೈತಕೋಲ್‌ನಲ್ಲಿದೆ. ದೊಡ್ಡ ದೊಡ್ಡ ಹಡಗುಗಳಲ್ಲಿ ಸರಕು ಸಾಮಗ್ರಿಗಳ ಆಮದು ಹಾಗೂ ರಫ್ತು ಈ ಬಂದರಿನಿಂದ ನಡೆಯುತ್ತದೆ.

**ಐ.ಎನ್.ಎಸ್.ಕದಂಬ (ಸೀ ಬರ್ಡ್) ನೌಕಾನೆಲೆ :**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೧೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧೦ ಕಿ.ಮೀ.




ಐ.ಎನ್.ಎಸ್. ಕದಂಬ

ಕಾರವಾರದ ಕಡಲ ತೀರದಲ್ಲಿ ಕಾರವಾರದಿಂದ ೧೦ ಕಿ.ಮೀ ದೂರದಲ್ಲಿ ಭಾರತದ ರಕ್ಷಣೆಗಾಗಿ ನೌಕಾ ಪಡೆಯ ನೆಲೆ ಆಯ್ ಎನ್ ಎಸ್ ಕದಂಬ (ಸೀಬರ್ಡ್) ಇದೆ. ಒಳಚಿತ್ರದಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಐ.ಎನ್.ಎಸ್. ಚಾಪೆಲ್ ನೌಕೆಯನ್ನು ಕಾಣಬಹುದು.

**ಸಾಗರ ಮತ್ಸ್ಯಾಲಯ:**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೧ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೧ ಕಿ.ಮೀ



ಕಾರವಾರ ಗೋವಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮುದ್ರ ಮೀನುಗಳ ಪ್ರದರ್ಶನ ಕೇಂದ್ರವಿದೆ. ಇದರ ಸಮೀಪ ನೃತ್ಯ ಕಾರಂಜಿಯ ಅದ್ಭುತ ಪ್ರದರ್ಶನವನ್ನೂ ನೋಡಬಹುದು. ಜಿಲ್ಲಾ ವಿಜ್ಞಾನ ಕೇಂದ್ರವೂ ಇಲ್ಲಿಯೇ ಹತ್ತಿರದಲ್ಲಿದೆ.

**ಹೈಚರ್ಚ್ :**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೦ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೦ ಕಿ.ಮೀ



ಕಾರವಾರದ ಹೃದಯಭಾಗದಲ್ಲಿ ಹಳೆಯದಾದ ಒಂದು ಚರ್ಚ್ ಇದೆ. ಅನೇಕ ಮೆಟ್ಟಿಲೇರಿದ ನಂತರ ಕಾಣಸಿಗುವ ಈ ಪ್ರಾರ್ಥನಾ ಮಂದಿರವು ಕ್ರೈಸ್ತರ ಪ್ರಮುಖ ಆರಾಧನಾ ಕೇಂದ್ರವಾಗಿದೆ.

**ಕಾಳಿ ಸೇತುವೆ**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೫ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೫ ಕಿ.ಮೀ



ಕಾಳಿ ನದಿಯ ಮೂಲಕ ಕಾರವಾರ ಹಾಗೂ ಗೋವಾಕ್ಕೆ ಸಂಪರ್ಕ ಕಲ್ಪಿಸಲು ೧೯೮೦ ರಲ್ಲಿ ಈ ಸೇತುವೆ ನಿರ್ಮಾಣ ಮಾಡಲಾಗಿದೆ. ಇಲ್ಲಿಂದ ೨ ಕಿ.ಮೀ. ದೂರದಲ್ಲಿ ದೇವಭಾಗ ದ್ವೀಪವಿದೆ. ಇಲ್ಲಿಯೇ ಅರಣ್ಯ ಇಲಾಖೆಯ ಪ್ರವಾಸಿ ಮಂದಿರವೂ ಇದೆ.

**ಸದಾಶಿವಗಡ ಕೋಟೆ:**

**ದೂರ ಎಷ್ಟು ?**
ತಾಲೂಕು : ಕಾರವಾರ
ತಾಲೂಕಿನಿಂದ : ೬ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೬ ಕಿ.ಮೀ




ಕಾರವಾರದಿಂದ ಕಾಳಿ ಸೇತುವೆಯ ಮೂಲಕ ಪ್ರಯಾಣಿಸುವಾಗ ಗುಡ್ಡವನ್ನು ಇಭ್ಭಾಗ ಮಾಡಿದ ಚಿತ್ರಣ ಕಾಣುತ್ತದೆ. ಗುಡ್ಡದ ಮೇಲೆ ಪುರಾತನ ಕೋಟೆ ಇದೆ. ಇಲ್ಲಿಗೆ ಶಿವಾಜಿ ಮಹಾರಾಜರು ೧೬೬೫ ರಲ್ಲಿ ಭಟಿ ನೀಡಿದ ಬಗ್ಗೆ ಐತಿಹ್ಯವಿದೆ. ಇದನ್ನು ಸೋದೆಯ ಸದಾಶಿವರಾಯರು ಕಟ್ಟಿಸಿದರು ಎನ್ನಲಾಗುತ್ತದೆ.

**ಸದಾಶಿವಗಡ ದರ್ಗಾ:**

**ದೂರ ಎಷ್ಟು?**
ತಾಲೂಕು : ಕಾರವಾರ
ತಾಲೂಕಿನಿಂದ : ೬ ಕಿ.ಮೀ
ಜಿಲ್ಲಾ ಕೇಂದ್ರದಿಂದ : ೬ ಕಿ.ಮೀ




ಸದಾಶಿವಗಡ ಕೋಟೆಯ ಎದುರುಗಡೆ ಷಹಾ ಕರಿಬುದ್ದೀನ್ ದರ್ಗಾ ಇದೆ. ಇದು ಮುಸಲ್ಮಾನ ಬಾಂಧವರ ಪುಣ್ಯ ಕ್ಷೇತ್ರಗಳಲ್ಲೊಂದು. ಹಿಂದೂ ಮತ್ತು ಮುಸಲ್ಮಾನ್ ಬಾಂಧವರು ಸೇರುವ ಭಾವೈಕ್ಯತೆಯ ಕೇಂದ್ರವಾಗಿಯೂ ಪ್ರಸಿದ್ಧಿ ಪಡೆದಿದೆ.

***